1

# ಇಸ್ರಾಯೇಲಿನಲ್ಲಿ ದೇವರ ಮನುಷ್ಯನು

## (1 ಅರಸು 16:29-17:1)

ಬನ್ನಿ ನಾವು ಈಗ ಜೊತೆಯಾಗಿ ಒಬ್ಬ ವಿಶೇಷ ವ್ಯಕ್ತಿಯ ಬಗೆಗೆ ಅಭ್ಯಾಸಿಸೋಣ. ಈ ಮನುಷ್ಯನು ಇಸ್ರಾಯೇಲ್ಯರಲ್ಲಿ ಹೊರಹೊಮ್ಮಿದ ಅತೀ ಶ್ರೇಷ್ಟನೂ ಮತ್ತು ರೋಮಾಂಚನಕಾರಿಯಾದ ಚಾರಿತ್ರ್ಯವನ್ನು ಹೊಂದಿದವನು ಎಂದು ಕರೆಯಲ್ಪಡುತ್ತಾನೆ. ಕತ್ತಲೆಯನ್ನು ಹೊಡೆದೊಡಿಸುವ ಕೋಲ್ಮಿಂಚಿನ ರೂಪದಲ್ಲಿ ಆತನು ಬಂದನು, ಆತನು ಒಬ್ಬ ಸಲಹೆಗಾರನಂತೆ ತನ್ನ ಸಮಯದಲ್ಲಿನ ಕತ್ತಲೆಯನ್ನು ಸೀಳುವ ಗೆರೆಯಂತೆ ಆತನಿದ್ದನು; ಅಕ್ಷರ ಸಹಿತವಾಗಿ ಆತನು ಸುಂಟರಗಾಳಿಯಲ್ಲಿ ತೇಲಿಹೋದವನು. "ಬೆಂಕಿಯ ಮನುಷ್ಯ" ಎಂದು ಕರೆಯಲ್ಪಡುವ ಮನುಷ್ಯನು ಆತನಾಗಿದ್ದನು. ಆತನೇ ನಾವು ಕರೆಯುವ "ಇಸ್ರಾಯೇಲ್ಯರಲ್ಲಿಯ ದೇವರ ಮನುಷ್ಯನಾದ" - ಎಲೀಯ, ನಾವು ತಿಳಿದಂತೆ, ಎಲೀಯನ ವಿಷಯವಾಗಿ ನಾವು ತಿಳುಕೊಂಡ ಸಂಗತಿಗಳನ್ನು ಬೈಬಲಿನ ಕೆಲವೇ ಅಧ್ಯಾಯಗಳಿಂದ ನಾವು ತಿಳಿದುಕೊಳ್ಳಬಹುದು.

ಆದರೆ ಕೆಲ ಸಾರಿ ಈ ಮನುಷ್ಯನ ಬಗೆಗೆ ಮಾಡಿಕೊಳ್ಳಬಹುದಾದ ಕಲ್ಪನೆಗಳು ನಮ್ಮನ್ನು ಸೆರೆಹಿಡಿಯುವಂತವುಗಳಾಗಿವೆ. ಹೊಸ ಒಡಂಬಡಿಕೆಯ ಸಮಯದಲ್ಲಿ ಅತಿ ಗೌರವ ಹೊಂದಿದ ವ್ಯಕ್ತಿಯಾಗಿದ್ದವರಲ್ಲಿ ಅಬ್ರಹಾಮ ಮತ್ತು ಮೋಶೆಯರ ಪ್ರಕಾಶಮಾನವಾದ ಚಾರಿತ್ರ್ಯದಲ್ಲಿ ಇವನ ಚಾರಿತ್ರ್ಯವು ಮೊಬ್ಬಾಗಿ ಕಾಣುತ್ತದೆ. ಆತನು ಹೊಸ ಒಡಂಬಡಿಕೆಯಲ್ಲಿ ಹಳೆಯ ಒಡಂಬಡಿಕೆಯ ಯಾವುದೇ ಪ್ರವಾದಿಗಳಿಗಿಂತಲೂ ಹೆಚ್ಚಾಗಿ ಮೂವತ್ತಕ್ಕಿಂತ ಹೆಚ್ಚು ಬಾರಿ ಸೂಚಿತನಾಗಿದ್ದಾನೆ.

ಯೇಸು ರೂಪಾಂತರ ಹೊಂದಿದ್ದಾಗ, ಮೋಶೆಯ ಮತ್ತು ದಾವೀದನ ಜೊತೆಯಲ್ಲಿ ಕಾಣಲಿಲ್ಲ, ಅಥವಾ ಮೋಶೆ ಯೆಶಾಯನ ಜೊತೆ ಕಾಣಲಿಲ್ಲ, ಆದರೆ ಮೋಶೆ ಮತ್ತು ಎಲೀಯನ ಜೊತೆಯಲ್ಲಿ ಕಾಣಿಸಿಕೊಂಡನು. ಮೋಶೆಯು ಧರ್ಮಶಾಸ್ತ್ರವನ್ನು ಕೊಟ್ಟವನು; ಎಲೀಯನು ಧರ್ಮಶಾಸ್ತ್ರವನ್ನು ಪಾಲಿಸುವಂತೆ ಕರೆಕೊಟ್ಟವನು. ದೇವರ ಆಜ್ಞೆಗಳನ್ನು ಪ್ರಚುರಪಡಿಸುವದು ಮಹತ್ವವಾದದ್ದು; ತತ್ವಗಳನ್ನು ಮತ್ತು ದೇವರ ದಿವ್ಯದರ್ಶನದ ನೀತಿವಿಧಿಗಳಿಗೆ ಜನರನ್ನು ಹಿಂದಕ್ಕೆ ತರುವದು ಅದರಷ್ಟೇ ಸಮಾನವಾಗಿಯೇ ಮಹತ್ವಪೂರ್ವಕವಾದದ್ದು ಆಗಿದೆ.

ಎಲೀಯನು ಮೂಲನಾದವನು. ಒಬ್ಬನು ಕೆಲ ಡಾಲರಗಳಿಗೆ ಮೊನಾಲಿಸಾದ ಒಂದು ಪ್ರತಿಯನ್ನು ಅಥವಾ ಒಂದು ಪ್ರಿಂಟನ್ನು ಪಡೆದುಕೊಳ್ಳಬಹುದು, ಆದರೆ ಮೂಲಕೃತಿಯು ಬಲು ಮೌಲ್ಯವಾದದ್ದು ಯಾವ ಬೆಲೆಯೂ ಅಲ್ಲಿ ಸ್ಥಾನ ಪಡೆಯದು. ಆದಾಗ್ಯೂ, ಎಲೀಯನು ದೇವರಿಗಾಗಿ ತನ್ನ ಸಮಯದಲ್ಲಿ ಸಾಧಿಸಿದ ಕಾರ್ಯಗಳ ಮಹತ್ವವನ್ನು ಗೌಣ್ಯವನ್ನು ನಮಗೆ ಲೆಕ್ಕ ಹಾಕುವುದಕ್ಕೆ ಸಾಧ್ಯವಾಗದು.

ಎಲೀಯನು ಮತ್ತು ಆತನು ಮಾಡಿದ್ದನ್ನು ನಾವು ಯೋಚಿಸುತ್ತಿದ್ದಂತೆ, ಆತನು ಅತೀಂದ್ರೀಯ ಶಕ್ತಿಯ ಮಾನವ ಎಂದು ನಾವು ಆತನ ಬಗೆಗೆ ಯೋಚಿಸಬೇಕಿಲ್ಲ, ಈ ಕಾರ್ಯಗಳು ಕೆಲವರು ನೆರವೇರಿಸುವದಕ್ಕೆ ಸಾಧ್ಯವೆಂದು ಅರ್ಥವಲ್ಲ. ಆತನ ಜನರು ಈ ತಪ್ಪನ್ನು ಮಾಡಿದರು. ಒಡಂಬಡಿಕೆಗಳ ಮಧ್ಯದ ಅವಧಿಯಲ್ಲಿ, ಯೆಹೂದಿಗಳು ಛಾಯಕೃತ ಚಿತ್ರದಂತೆ, ಮರ್ತ ಮಾನವನಿಗಿಂತ ಹೆಚ್ಚಿನ ವಿಶೇಷವನ್ನು ಆತನಿಗೆ ಕೊಡುವದು "ಹೀಗೆ ಎಲೀಯನ ನಮ್ಮಂಥ ಸ್ವಭಾವವುಳ್ಳನಾಗಿದ್ದನು" (ಯಾಕೋಬ 5:17) ಎಂದು ಹೇಳಿದ್ದಾನೆ.

KJV ಎಲೀಯನನ್ನು ದೃಷ್ಟಾಂತವಾಗಿ ಬಳಸಿಕೊಂಡಾಗ, ಆತನು ಬಲವಾದ ಒತ್ತಡಕ್ಕೆ ಒಳಗಾದನು. ನಾವು ಭಾವಿಸುವಂತೆಯೇ ಆತನು ಭಾವಿಸಿದನು. ನಾವು ಹೋರಾಡಿದಂತೆಯೇ ಆತನು ಹೋರಾಡಿದನು. ನಾವು ನಿರಾಶೆಯನ್ನು ಪಡೆದಂತೆಯೇ ಆತನೂ ನಿರಾಶೆಯನ್ನು ಹೊಂದಿದನು.

ಒಂದು ಸತ್ಯ ಮಾತ್ರ ನಿಜ, ಎಲೀಯನು ವಿಶೇಷ ಸಮಯಕ್ಕಾಗಿ ಮತ್ತು ವಿಶೇಷ ಸ್ಥಳಕ್ಕಾಗಿನ ದೇವರ ವಿಶೇಷ ಮನುಷ್ಯನಾಗಿದ್ದನು. ಆತನ ಜೀವಿತದ ಮೂಲಕ ನಾವು ಸಾಗುವಾಗ, ಇದನ್ನು ಯಾಕೆಂದು ನಾವು ನೋಡುತ್ತೇವೆ.

## ಎಲೀಯನ ದಿನದಲ್ಲಿನ ಇಸ್ರಾಯೇಲು

ಎಲೀಯನನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಲು, ಆತನು ಇದ್ದ ಸಮಯವನ್ನು, ಸಂದರ್ಭಗಳನ್ನು ನಾವು ನೋಡಲೇಬೇಕು. ಒಂದು ಸಾರಿ ನಾನು ಆಕರ್ಷಣೀಯವಾದ ಚಿತ್ರವನ್ನು ನೋಡಿದೆನು. ನಂತರ ನಾನು ಆ ಚಿತ್ರದ ಅಡಿಯಲ್ಲಿನ ಟಿಪ್ಪಣಿಯನ್ನು ನೋಡಿದೆನು. ಇದು ಕಾಲು ಮತ್ತು ಕೈಗಳಿಲ್ಲದ ಒಬ್ಬನಿಂದ ಮಾಡಲ್ಪಟ್ಟಿದ್ದು, ಅದು ಕಲಾಕಾರನು ತನ್ನ ಬಾಯಲ್ಲಿ ಬ್ರಶ್‌ನ್ನು ಹಿಡಿದುಕೊಂಡು ಬಣ್ಣವನ್ನು ಬರೆದಿದ್ದನು. ಆಗ ನಾನು ನಿಜವಾಗಿಯೂ ಆ ಚಿತ್ರವನ್ನು ಪ್ರಶಂಸಿಸಿದೆನು. ಹಾಗೆಯೇ 1 ಅರಸು ಮತ್ತು 17 ಅದರ ಮುಂದಿನ ಅಧ್ಯಾಯಗಳನ್ನು ಸಹಜ ವಾಗಿ ಓದುವಾಗಲೂ ನಾವು ಎಲೀಯನನ್ನು ಪ್ರಶಂಸಿಸುವವರಾಗಿದ್ದೇವೆ, ಆತನು ಜೀವಿಸಿದ ಮತ್ತು ಕಾರ್ಯಮಾಡಿದ ಸಮಯಗಳ ಹಿನ್ನೆಲೆಯಲ್ಲಿ ನಾವು ಅಭ್ಯಾಸಿಸುತ್ತಿರುವಂತೆಯೇ ನಾವು ಆತನನ್ನು ಹೆಚ್ಚಾಗಿ ಅರ್ಥೈಸಿಕೊಳ್ಳುವವರಾಗಿದ್ದೇವೆ:

> ಯೆಹೂದ್ಯರ ಅರಸನಾದ ಆಸನ ಆಳಿಕೆಯ ಮೂವತ್ತೆಂಟನೆಯ ವರುಷದಲ್ಲಿ ಒಮ್ರಿಯ ಮಗನಾದ ಆಹಾಬನು ಇಸ್ರಾಯೇಲ್ಯರ ಅರಸನಾಗಿ ಸಮಾರ್ಯ ಪಟ್ಟಣದಲ್ಲಿ ಇಪ್ಪತ್ತೆರಡು ವರುಷ ಆಳಿದನು (1 ಅರಸು 16:29).

"ಯುದಾಯ" ಮತ್ತು "ಇಸ್ರಾಯೇಲು" ಎಂಬ ಪದಗಳನ್ನು ಗಮನಿಸಿರಿ. ಸೌಲ, ದಾವೀದ, ಮತ್ತು ಸೊಲೊಮೋನರು ಈ ಸಂಯುಕ್ತ ರಾಜ್ಯದ ಮೇಲೆ ಆಳಿದರು. ಹೇಗೂ, ಈ ರಾಜ್ಯವು ಸೊಲೊಮೋನನ ಮಗನಾದ ರೆಹೆಬ್ಬಾಮನ ತಪ್ಪಾದ ಸಲಹೆಯನ್ನು ಕೇಳಿದ್ದರಿಂದ ವಿಭಾಗವಾಯಿತು (1 ಅರಸು 12). ಅಂತರ್ ಯುದ್ಧವು ನಡೆಯಿತು. ಹೊಗೆಯು ಕರಗಿದಾಗ ಎರಡೂ ರಾಜ್ಯದವರು ಒಬ್ಬರಿಗೋಸ್ಕರ ಒಬ್ಬರು ನಿಂತುಕೊಂಡರು. ದಕ್ಷಿಣ ರಾಜ್ಯವು ಹನ್ನೆರಡು ಕುಲಗಳಲ್ಲಿ ಎರಡನ್ನು ಮಾತ್ರ ಒಳಗೊಂಡಿತ್ತು. ಈ ಎರಡು ಕುಲಗಳಲ್ಲಿ ಪ್ರಮುಖವಾದದ್ದೆಂದರೆ ಕೇವಲ ಯುದಾಯವಾಗಿತ್ತು, ಹೀಗೆ ದಕ್ಷಿಣ ರಾಜ್ಯವು ಯುದಾಯ ರಾಜ್ಯವೆಂದೇ ಕರೆಯಲ್ಪಡುತ್ತಿತ್ತು. ಈ ರಾಜ್ಯವು ಬೆಬಿಲೋನಿಗೆ ಬೀಳುವ ಸಮಯದವರೆಗೂ, ಇದು ಹದಿನೇಳು ಅಪ್ರತಿಮ ಅರಸರನ್ನು ಹೊಂದಿತ್ತು, ಇವರೆಲ್ಲರೂ ದಾವೀದನ ಸಂತತಿಯವರಾಗಿದ್ದರು.

ಉತ್ತರದ ರಾಜ್ಯವು ನಮಗೆ ಬಲು ಕುತೂಹಲಮಯವಾಗಿದೆ, ಯಾಕೆಂದರೆ ಎಲೀಯನು ಉತ್ತರದಲ್ಲಿ ಕಾರ್ಯನಿರ್ವಹಿಸುತ್ತಿದ್ದರಿಂದಲೇ. ಉತ್ತರದ ರಾಜ್ಯವು ಇಸ್ರಾಯೇಲ್ಯರ ರಾಜ್ಯವೆಂದೇ ಗುರುತಿಸಲ್ಪಟ್ಟಿತು. ಯಾಕೆಂದರೆ ಇದು ಇಸ್ರಾಯೇಲ್ಯರ ಹನ್ನೆರಡು ಕುಲಗಳಲ್ಲಿ ಹತ್ತು ಕುಲಗಳಿಂದ ಇದು ನಿರ್ಮಿತವಾಗಿತ್ತು. ಇದರ ಮೊದಲ ಅರಸನು ಮೂರ್ತಿ ಪೂಜಕನಾದ ಯಾರೋಬ್ಬಾಮನು. ಹತ್ತೊಂಬತ್ತು ಯಶಸ್ವೀ ಅರಸರು, ಎಲ್ಲರೂ ಕೆಟ್ಟವರಾಗಿದ್ದರು, ಇವರು ಅಂತಿಮವಾಗಿ ಅಶೂರ್ಯರಿಂದ ನಾಶವಾಗುವವರೆಗೂ ಆ ರಾಷ್ಟ್ರವನ್ನು ಆಳಿದರು.

ಅಹಾಬನು ಇಸ್ರಾಯೇಲನ್ನು ಇಪ್ಪತ್ತೆರಡು ವರ್ಷಗಳವರೆಗೂ ಆಳಿದನು. ಧಾರ್ಮಿಕ ಇತಿಹಾಸವು ಹೇಳುವಂತೆ ಆತನ ಆಳ್ವಿಕೆಯ ರಾಷ್ಟ್ರವಾದಂತಹ ಇಸ್ರಾಯೇಲಿಗೆ ಉನ್ನತವಾದ

ಸಂಗತಿಯಾಗಿತ್ತು ಎಂದು. ಅಹಾಬನು ಶ್ರೇಷ್ಟ ಕಟ್ಟಡ ನಿರ್ಮಾಣಿಕನಾಗಿದ್ದನು (ಗಮನಿಸಿ 1 ಅರಸು 21:1; 22:39). ಆತನೊಬ್ಬ ಶ್ರೇಷ್ಟ ದಂಡನಾಯಕನಾಗಿದ್ದನು. ಆತನು ಸಿರಿಯದ ವಿರುದ್ಧ ಎರಡು ಯುದ್ಧಗಳನ್ನು ಗೆದ್ದಿದ್ದನು. ಒಂದು ಸಾರಿ ಆತನು ಆಶೇರ್ಯದಲ್ಲಿ ಯಶಸ್ವಿಯಾಗಿ ಹೋರಾಡಿದನು. ಆತನ ವಿದೇಶಿ ನೀತಿಯು ಘನವಾದದ್ದಾಗಿತ್ತು. ರಾಜಕೀಯವಾಗಿಯೂ, ಸಂಪತ್ತಿನಿಂದಲೂ, ಮತ್ತು ಸೈನಿಕದಳದಿಂದಲೂ, ಆತನು ಬಹುವಾಗಿ ಸಾಧಿಸಿದ್ದನು. ಆತನ ಆಳ್ವಿಕೆಯು ಸಾಮಾನ್ಯವಾಗಿ ಶಾಂತಿ ಸಮೃದ್ಧಿಯ ಸಮಯವಾಗಿತ್ತು.

ಹೇಗೋ, ಪ್ರೇರೇಪಿತ ಲೇಖಕರು ಸಾಧನೆಗಳ ಬಗ್ಗೆ ಅಲ್ಪ ಮಾತ್ರವನ್ನು ನಮಗೆ ಹೇಳುತ್ತಾರೆ. ಅವುಗಳು ಮಹತ್ವವಾದ ಸಂಗತಿಗಳಲ್ಲಿ. ಮೊದಲ ಅರಸು 16:30 ಆತನ ಆಳ್ವಿಕೆಯ ಬಗೆಗಿನ ದೇವರ ವಿಚಾರಣೀಯ ವಿಷಯವನ್ನು ನಮಗೆ ಕೊಡುವುದಾಗಿದೆ: "ಒಮ್ರಿಯ ಮಗನಾದ ಅಹಾಬನು ... ತನ್ನ ಪೂರ್ವಾಧಿಕಾರಿಗಳೆಲ್ಲರಿಗಿಂತಲೂ ದುಷ್ಟನಾಗಿ ಯೆಹೋವನ ದೃಷ್ಟಿಯಲ್ಲಿ ದ್ರೋಹಿಯಾದನು."

"ಪೂರ್ವಧಿಕಾರಿಗಳೆಲ್ಲರಿಗಿಂತಲೂ": ಎಂಥ ಕೆಟ್ಟತನವಿತ್ತು? ಒಂದು ವೇಳೆ ಆತನು ಸಂತರ ಸಾಲಿನ ನಂತರದಲ್ಲಿ ಬಂದಿದ್ದಾದರೆ, ಅದು ಬಹುಶಃ ಬಲು ಕೆಟ್ಟತನವಾಗುತ್ತಿರಲಿಲ್ಲ. ಈ ಪದಗುಚ್ಚವನ್ನು ಅರ್ಥೈಸಿಕೊಳ್ಳಲು ಅಹಾಬನ ಪೂರ್ವಾಧಿಕಾರಿಗಳನ್ನು ನಾವು ವಿಚಾರಿಸಲೇಬೇಕು.

*ಯಾರೋಬ್ಬಾಮನು,* ಇಸ್ರಾಯೇಲ್ಯರ ಮೊದಲ ಅರಸನಾಗಿದ್ದು, ಮೂರ್ತಿ ಪೂಜಕನಾಗಿದ್ದನು.

> ಅರಸನು (ಯಾರೋಬ್ಬಾಮನು) ಬಹಳವಾಗಿ ಆಲೋಚಿಸಿ ಕಡೆಯಲ್ಲಿ ಬಂಗಾರದ ಎರಡು ಬಸವನ ಮೂರ್ತಿಗಳನ್ನು ಮಾಡಿಸಿ ಇಸ್ರಾಯೇಲ್ಯರಿಗೆ - ನೀವು ಜಾತ್ರೆಗಾಗಿ ಯೆರೂಸಲೇಮಿಗೆ ಹೋದದ್ದು ಸಾಕಾಯಿತು; ಇಗೋ ನಿಮ್ಮನ್ನು ಐಗುಪ್ತದಿಂದ ಕರತಂದ ದೇವರುಗಳು ಇಲ್ಲಿರುತ್ತವೆ ಎಂದು ಹೇಳಿ ಅವುಗಳಲ್ಲಿ ಒಂದನ್ನು ಬೇತೇಲಿನಲ್ಲಿರಿಸಿ ಇನ್ನೊಂದನ್ನು ದಾನಿಗೆ ಕಳುಹಿಸಿದನು ... ಇದಲ್ಲದೆ ಅವನು ಪೂಜಾರಿಗಿರಿಗಳ ಮೇಲೆ ಗುಡಿಗಳನ್ನು ಕಟ್ಟಿಸಿ ಲೇವಿಯರಲ್ಲದ ಕನಿಷ್ಟ ಜನರನ್ನೂ ಯಾಜಕರನ್ನಾಗಿ ನೇಮಿಸಿದನು. ಇಸ್ರಾಯೇಲ್ಯರು ಎಂಟನೆಯ ತಿಂಗಳ ಹದಿನೈದನೆಯ ದಿವಸದಲ್ಲಿ ಹಬ್ಬವನ್ನಾಚರಿಸಬೇಕೆಂದು ಯಾರೊಬ್ಬಾಮನು ಸ್ವೇಚ್ಛೆಯಿಂದ ಗೊತ್ತುಮಾಡಿ ಆ ಸಮಯಕ್ಕೆ ತಾನೂ ಬೇತೇಲಿನ ಯಜ್ಞವೇದಿಯ ಬಳಿಗೆ ಹೋಗಿ ಧೂಪಸುಡುವುದಕ್ಕಾಗಿ ಅದರ ಮೆಟ್ಲುಗಳನ್ನು ಹತ್ತುತ್ತಿರುವಾಗ ... (1 ಅರಸು 12:28, 29, 31, 33).

ಯಾರೊಬ್ಬಾಮನು ಒಬ್ಬ ನೇತಾರನಾಗಿದ್ದನು. ಆತನು ಮೂರ್ತಿ ಪೂಜೆಯ ಬೀಜವನ್ನು ಹಾಕಿದನು, ಮತ್ತು ಅವನ್ನು ಆಳವಾಗಿ ನೆಟ್ಟನು. ಆತನನ್ನು ಹಿಂಬಾಲಿಸಿದವುಗಳ ಬಗೆಗೆ, ನಾವು ಅರಸುಗಳಲ್ಲಿ ಓದುತ್ತಿದ್ದಂತೆ ಅಲ್ಲಿ ತಿರುಗಿ ಅವುಗಳು ಯಾರೋಬ್ಬಾಮನು ದುಷ್ಟಮಾರ್ಗದಲ್ಲಿ ನಡೆಯುವುದು ಗಮನಕ್ಕೆ ಬರುವುದನ್ನು ನಾವು ಕಾಣುತ್ತೇವೆ.

ಯಾರೋಬ್ಬಾಮನು ಇಪ್ಪತ್ತೆರಡು ವರ್ಷ ಆಳ್ವಿಕೆ ಮಾಡಿದನು; ನಂತರ ಆತನ ಮಗನಾದ ನಾದಾಬನು ಆತನ ಸ್ಥಳದಲ್ಲಿ ಆಳ್ವಿಕೆ ಮಾಡಿದನು (1 ಅರಸು 14:20).

*ನಾದಾಬನು* ಹೀಗೆ ಹೇಳಬಹುದಿತ್ತು, "ಸಾಕೇಸಾಕು. ಯೆಹೋವನ ಆರಾಧನೆ ಮಾಡುವುದನ್ನು ತಿರುಗಿ ಪಡಕೊಳ್ಳುವುದು ನಮಗೆ ಅವಶ್ಯವಿದೆ" ಎಂದು. ಆದರೆ ಆತನು ಹಾಗೆ ಮಾಡಿದನೇ? ಇಲ್ಲ.

> ಯಾರೊಬ್ಬಾಮನ ಮಗನಾದ ನಾದಾಬನು ಇಸ್ರಾಯೇಲ್ಯರ ಅರಸನಾಗಿ ಎರಡು ವರ್ಷ ಆಳಿದನು. ಇವನು ಇಸ್ರಾಯೇಲ್ಯರನ್ನು ಪಾಪಕ್ಕೆ ಪ್ರೇರಿಸಿದ ತನ್ನ ತಂದೆಯ ಮಾರ್ಗದಲ್ಲಿ ನಡೆದು ಯೆಹೋವನ ದೃಷ್ಟಿಯಲ್ಲಿ ದ್ರೋಹಿಯಾದನು (1 ಅರಸು 15:25, 26).

ಎರಡು ವರ್ಷಗಳ ನಂತರ, ನಾದಾಬನು ಭಾಷೆನೆಂಬವನಿಂದ ಕೊಲ್ಲಲ್ಪಟ್ಟನು (1 ಅರಸು 15:27, 28).

*ಭಾಷನು* ಹೊಸ ಸಾಮ್ರಾಜ್ಯವನ್ನು ಪ್ರಾರಂಭಿಸಿದನು. ಹೊಸ ಪ್ರಾರಂಭದೊಂದಿಗೆ, ಇಸ್ರಾಯೇಲಿನ ಮೇಲೆ ಹೊಸ ಒಳ್ಳೇಯ ರಾಜನನ್ನು ಹೊಂದುವ ಸಾಧ್ಯತೆಯೂ ಅಸ್ತಿತ್ವದಲ್ಲಿತ್ತು. ಮತ್ತೊಂದಾವರ್ತಿ, ಇಲ್ಲ: ಭಾಷನು ತನ್ನ ಆಳ್ವಿಕೆಯನ್ನು ಸಾಮಾಹಿಕವಾಗಿ ಕೊಲೆಮಾಡುವ ಮೂಲಕ ಪ್ರಾರಂಭಿಸಿದನು. "ಅರಸನಾದ ಕೂಡಲೆ ಯಾರೊಬ್ಬಾಮನ ಮನೆಯವರಲ್ಲಿ ಒಬ್ಬನನ್ನೂ ಜೀವದಿಂದುಳಿಸದೆ ಎಲ್ಲರನ್ನೂ ಸಂಹರಿಸಿದನು. ಹೀಗೆ ಯೆಹೋವನು ಶೀಲೋವಿನ ಪ್ರವಾದಿಯಾದ ಅಹೀಯನ ಮುಖಾಂತರವಾಗಿ ಹೇಳಿಸಿದ ಮಾತು ನೆರವೇರಿತು" (1 ಅರಸು 15:29).

> ಯೆಹೂದದ ಅರಸನಾದ ಆಸನ ಆಳಿಕೆಯ ಮೂರನೆಯ ವರುಷದಲ್ಲಿ ಅಹೀಯನ ಮಗನಾದ ಭಾಷನು ಇಸ್ರಾಯೇಲ್ಯರ ಅರಸನಾಗಿ ತಿರ್ಚದಲ್ಲಿದ್ದುಕೊಂಡು ಇಪ್ಪತ್ತನಾಲ್ಕು ವರುಷ ಆಳಿದನು. ಇವನು ಇಸ್ರಾಯೇಲ್ಯರನ್ನು ಪಾಪಕ್ಕೆ ಪ್ರೇರಿಸಿದ ಯಾರೊಬ್ಬಾಮನ ಮಾರ್ಗದಲ್ಲಿ ನಡೆದು ಯೆಹೋವನ ದೃಷ್ಟಿಯಲ್ಲಿ ದ್ರೋಹಿಯಾದನು (1 ಅರಸು 15:33, 34).

ಅಂತಿಮವಾಗಿ ಬಾಷನು ಮರಣಹೊಂದಿದನು, ಮತ್ತು ಆತನ ಮಗನಾದ ಏಲನು ಆಳಲು ಆರಂಭಿಸಿದನು (1 ಅರಸು 16:6).

*ಏಲನು* ಎರಡು ವರ್ಷಗಳವರೆಗೆ ಆಳಿದನು (1 ಅರಸು 16:8). ಈತನೊಬ್ಬ ಇಸ್ರಾಯೇಲ್ಯರಲ್ಲಿ ದೇವರಿಲ್ಲದೆ ಬಹುಕಾಲದವರೆಗೆ ರಾಜ್ಯವಾಳಿದ ಆಡಳಿತಗಾರರಲ್ಲಿ ಮತ್ತೊಬ್ಬವನಾಗಿದ್ದಾನೆ:

> ಅವನ ಸೇವಕನೂ ಅವನ ರಥ ಬಲದ ಅರ್ಧಭಾಗಕ್ಕೆ ಅಧಿಪತಿಯೂ ಆಗಿದ್ದ ಜಿಮ್ರಿ ಎಂಬವನು ಅವನಿಗೆ ವಿರೋಧವಾಗಿ ಒಳಸಂಚುಮಾಡಿದನು. ಅರಸನು ತಿರ್ಚದಲ್ಲಿ ತನ್ನ ಮನೆಯ ಉಗ್ರಾಣಿಕನಾದ ಅರ್ಚನೆಂಬವನ ಮನೆಯಲ್ಲಿ ಕುಡಿದು ಮತ್ತನಾಗಿರುವಾಗ ಜಿಮ್ರಿಯು ಅಲ್ಲಿ ಹೋಗಿ ಅವನ ಮೇಲೆ ಬಿದ್ದು ಅವನನ್ನು ಕೊಂದುಹಾಕಿ ಅವನಿಗೆ ಬದಲಾಗಿ ತಾನು ಅರಸನಾದನು (1 ಅರಸು 16:9, 10).

*ಜಿಮ್ರಿಯು* ಭಾಷನ ಮನೆಯವರನ್ನು ಕೊಲ್ಲುವುದರ ಮೂಲಕ ತನ್ನ ಆಳ್ವಿಕೆಯನ್ನು ಆರಂಭಿಸಿದನು (1 ಅರಸು 16:11). ಆತನು ಎಲ್ಲಿಯವರೆಗೆ ಮುಂದುವರೆದನು? "ಜಿಮ್ರಿಯು ತಿರ್ಚದಲ್ಲಿ ಇಸ್ರಾಯೇಲ್ಯರ ಅರಸನಾಗಿ ಏಳು ದಿವಸ ಆಳಿದನು" (1 ಅರಸು 16:15). ನಂತರ ಜನರು ಜಿಮ್ರಿಯ ಮೇಲೆ ಕೋಪಗೊಂಡರು ಮತ್ತು ಅವರು ಒಮ್ರಿಯನ್ನು ತಮ್ಮ ಸೇನೆಯ ಸೇನಾಪತಿಯನ್ನಾಗಿ, ಅರಸನನ್ನಾಗಿ ಆರಿಸಿದರು. ಒಮ್ರಿಯು ಜಿಮ್ರಿಯ ಸ್ಥಾನಕ್ಕೆ ಬಂದಾಗ, ಜಿಮ್ರಿಗೆ ತಾನು ತಪ್ಪಿಸಿಕೊಳ್ಳಲಾರೆನು ಎಂದು ಕಂಡುಕೊಂಡನು, ಹೀಗಾಗಿ ಆತನು ತನ್ನ ಸುತ್ತಲಿನ ಅರಸನ ಅರಮನೆಯನ್ನು ಆತನು ಸುಟ್ಟುಹಾಕಿದನು (ಆತನು "ನಾನು ಪಡೆದುಕೊಳ್ಳದೆ ಹೋದರೆ ಯಾರೊಬ್ಬರೂ ಪಡಕೊಳ್ಳಬಾರದು" ಎಂಬ ಭಾವನೆಯನ್ನು ಹೊಂದಿದ್ದನು).

*ಒಮ್ರಿ.* ಇದು ನಮ್ಮನ್ನು ಅಹಾಬನ ತಂದೆಯಾದ ಒಮ್ರಿಯ ಆಡಳಿತದೆಡೆಗೆ ತರುತ್ತದೆ. ಅಂತಃ ಕಲಹದ ಕೆಲವರ್ಷಗಳ ನಂತರ, ಒಮ್ರಿಯು ಉತ್ತರದ ಎಲ್ಲಾ ರಾಜ್ಯಗಳ ಮೇಲೆ ಆಳಿದನು. ಆತನು ಹನ್ನೆರಡು ವರ್ಷಗಳ ವರೆಗೆ ಆಳಿದನು ಮತ್ತು ಸಮಾರ್ಯ ಪಟ್ಟಣವನ್ನು ಕಟ್ಟಿದನು (1 ಅರಸು 16:23, 24). ಮಾನವರ ದೃಷ್ಟಿಕೋನದಿಂದ, ಆತನ ಆಳ್ವಿಕೆಯು ಯಶಸ್ವಿಯುತವಾದದ್ದು. ದೇವರು ಆತನ ಆಳ್ವಿಕೆಯನ್ನು ಹೇಗೆ ನೋಡಿದನು?

> ಇವನು ಯೆಹೋವನ ದೃಷ್ಟಿಯಲ್ಲಿ ದ್ರೋಹಿಯೂ ತನ್ನ ಪೂರ್ವಾಧಿಕಾರಿಗಳೆಲ್ಲರಿಗಿಂತ ದುಷ್ಟನೂ ಆಗಿದ್ದನು. ಇಸ್ರಾಯೇಲ್ಯರು ವಿಗ್ರಹಗಳಿಂದ ತಮ್ಮ ದೇವರಾದ ಯೆಹೋವನನ್ನು ರೇಗಿಸುವಂತೆ ಅವರನ್ನು ಪಾಪಕ್ಕೆ ಪ್ರೇರಿಸಿದ ನೆಬಾಟನ ಮಗನಾದ ಯಾರೊಬ್ಬಾಮನ ಮಾರ್ಗದಲ್ಲಿ ಇವನೂ ನಡೆದನು (1 ಅರಸು 16:25, 26).

ಆತನು ಮರಣಹೊಂದಿದ ಮೇಲೆ ಆತನ ಬದಲಾಗಿ ಆತನ ಮಗನಾದ ಅಹಾಬನು ಅರಸನಾದನು (1 ಅರಸು 16:28).

ಆರು ದಶಕದ ರಕ್ತದೋಕಳಿ, ಅವನತಿ, ಕೊಲೆ, ವಿಗ್ರಹಾರಾಧನೆ, ದ್ವೇಷ, ಹಗೆ, ಒಳಸಂಚು ನಡೆಸುವದು, ಪಿತೂರಿ, ಮತ್ತು ಅನೈತಿಕತೆ ಮೂಲತಃದಿಂದ ನಾವು ಹಾದು ಹೋಗ ಬೇಕಾಗುತ್ತದೆ. "ಇವನು ತನ್ನ ಪೂರ್ವಧಿಕಾರಿಗಳೆಲ್ಲರಿಗಿಂತಲೂ ದುಷ್ಟನಾಗಿ ಯೆಹೋವನ ದೃಷ್ಟಿಯಲ್ಲಿ ದ್ರೋಹಿಯಾದನು" (1 ಅರಸು 16:30). ನಾವು ಇಸ್ರಾಯೇಲ್ಯರ ಇತಿಹಾಸದ ಕೆಳಗಿನ ಇಳಿಜಾರಿಗೆ ಮತ್ತು ಕಪ್ಪಾದ ಇರುಳಿಗೆ ನಾವು ಬರುವವರಾಗಿದ್ದೇವೆ. ಸಿಂಹಾಸನವೇ ಹಾಗಿದ್ದಾಗ, ದೇವಜನರ ನಾಯಕತ್ವವೇ ಹಾಗಿದ್ದಾಗ, ಜನರ ಗತಿಯನ್ನು ಊಹಿಸಿಕೊಳ್ಳಿ!

ನಮ್ಮ ಅಧ್ಯಯನವನ್ನು ಮತ್ತೆ ಪ್ರಾರಂಭಿಸುವಂತೆ, 31ನೇಯ ವಚನದತ್ತ ದೃಷ್ಟಿಹರಿಸುವಾ: "ಇವನು [ಅಹಾಬನು] ನೆಬಾಟನ ಮಗನಾದ ಯಾರೊಬ್ಬಾಮನ ಮಾರ್ಗದಲ್ಲಿ ನಡೆಯುವದು ಅಲ್ಪಪಾಪವೆಂದು ತಿಳಿದವನೂ ..." ಇಂದು ನಾವು "ಅದು ಅಷ್ಟು ಸಾಕಾಗಿರಲಿಲ್ಲವೋ ಎಂಬಂತೆ" ಅಥವಾ "ಮೂರ್ತಿ ಪೂಜೆಯನ್ನು ಮಾಡುವುದರಿಂದ ಯಾವ ಪರಿಣಾಮವಿಲ್ಲ ಎಂಬುದಾಗಲೀ ..." ಹೀಗೆ ಹೇಳಬಹುದು.

ಇಸ್ರಾಯೇಲ್ಯರಲ್ಲಿ ಸಂಗತಿಗಳು ಅಷ್ಟಾಗಿ ಕೆಟ್ಟುಹೋಗಿರಲಿಲ್ಲ ಎಂದು ನಾವು ಯೋಚಿಸಬಹುದು, ಆದರೆ ಅವು ಕೆಟ್ಟು ಹೋಗಿದ್ದವು. ವಚನ 31ರ ಕಡೆಯ ಭಾಗದಲ್ಲಿ ನಾವು ಬಲುಮಹತ್ವವಾದ ಭಾಗವನ್ನು ಕಾಣುತ್ತೇವೆ: "ಆತನು ಚೀದೋನ್ಯರ ಅರಸನಾದ ಎತ್ಬಾಳನ ಮಗಳು ಈಜೆಬೆಲ್ ಎಂಬಾಕೆಯನ್ನು ಮದುವೆಮಾಡಿಕೊಂಡು ಬಾಳ್‌ದೇವರನ್ನು ಪೂಜಿಸತೊಡಗಿದನು."

ಈ ಓದಿದಂತಹ ಅಧ್ಯಾಯಗಳಲ್ಲಿ ಇಸ್ರಾಯೇಲಿನ ಅರಸರ ಮದುವೆಯ ಸಂಬಂಧದ ಬಗೆಗೆ ನಾವೆಲ್ಲೂ ಓದುವುದಿಲ್ಲ, ಆದರೆ ಇಲ್ಲಿ ನಾವು ಓದುತ್ತೇವೆ. ಯಾಕೆ? ಯಾಕೆಂದರೆ ಅಹಾಬನು ಮದುವೆಯಾದದ್ದರಿಂದಲೇ.

ನಮ್ಮ ವೇದಭಾಗವು ಹೇಳುವಂತೆ ಆಕೆಯು "ಚೀದೋನ್ಯರ ಅರಸನಾದ ಎತ್ಬಾಳನ ಮಗಳು ಆಗಿದ್ದಳು" ಆಕೆಯೊಬ್ಬ ಅನ್ಯಳೂ, ದೇವರು ಇಸ್ರಾಯೇಲ್ಯರಿಗೆ ವಿಗ್ರಹಾರಾಧಕರನ್ನು ಮದುವೆ ಯಾಗಬಾರದೆಂದು ಹೇಳಿದ್ದಾನೆ (ಧರ್ಮೋಪದೇಶಕಾಂಡ 7:1-5). ಅವಳು ಹಾಗಿರಲಿಲ್ಲ, ಅವಳೊಬ್ಬ ಸಾಮಾನ್ಯ ವಿಗ್ರಹಾರಾಧಕಳಾಗಿದ್ದಳು. ಎತ್ಬಾಳನು ಫೋಯನಿಸಿಯನ್ನರ ಮುಖ್ಯ ದೇವತೆಯಾದ ಬಾಳನ ಪೂಜಾರಿಯಾಗಿದ್ದನು ಎಂದು ಇತಿಹಾಸವು ನಮಗೆ ತಿಳಿಸುತ್ತದೆ. ನಿರ್ದಿಷ್ಟವಾಗಿ ಆತನು ಬಾಳನ ಸಾಕ್ಷಾತ್ಕಾರ ವಾದ ಮೆಲ್ಕಾರ್ಟ್ ಮತ್ತು ಅಶೇರ್ ದೇವತೆಗಳ ಪೂಜಾರಿಯಾಗಿದ್ದನು. ಶಕ್ತಿಯ ದೇವತೆಗಳಿಗೆ ತನ್ನನ್ನು ಒಪ್ಪಿಸಿಕೊಂಡಿದ್ದಾಗಲೂ, ಆತನು ತನಗಾಗಿ ಶಕ್ತಿಯನ್ನು ಬೇಡುವವನಾಗಿದ್ದನು ಮತ್ತು ಫೆಲಿಸನನ್ನು ಕೊಲೆಗೈಯುವ ಮೂಲಕ ತೈರ್ ಮತ್ತು ಸೀದೋನ್ ಸಿಂಹಾಸನಕ್ಕೆ ಬಂದವನಾಗಿದ್ದನು. ಆತನ ರಾಜಪೋಷಾಕವು ರಕ್ತದ ವಾಸನೆಯಿಂದ ಕೂಡಿದ್ದಾಗಿತ್ತು. ಇಜೆಬೇಲಳು ತನ್ನ ತಂದೆಯಿಂದ ಒಳ್ಳೇಯ ರೀತಿಯ ಪಾಠವನ್ನು ಕಲಿತಿದ್ದಳು: ಅವಳ ದೇವರುಗಳಿಗಾಗಿನ ಉತ್ಕಟೇಚ್ಛೆ, ಮತ್ತು ಅವಳಿಗಿಂತ ಕೆಳತರದವರಿಗಾಗಿ ತಿರಸ್ಕಾರ ಇವುಗಳೇ. ಕರುಣೆ ಮತ್ತು ಅನುಕಂಪ ಇವುಗಳು ಅವಳ ಜೀವನದಲ್ಲಿರಲಿಲ್ಲ.

ಎರಡನೆಯದಾಗಿ, ಅಹಾಬನು ಅವಳು ಮಾಡಿದ ಸಂಗತಿಗಾಗಿ ಅವಳನ್ನು ಮದುವೆಯಾಗುವುದನ್ನು ನಾವು ಓದುತ್ತೇವೆ. ಆಕೆಯು ಬಾಳನ ಆರಾಧನೆಯನ್ನು ಯೆಹೋವನ ವಿಶೇಷ ಜನರಾದ ಇಸ್ರಾಯೇಲ್ಯರ ಹೃದಯದಲ್ಲಿ ಮತ್ತು ಜೀವನದಲ್ಲಿ ಪರಿಚಯಿಸಿದಳು.

"ಬಾಳ" ಇದರ ಅಕ್ಷರ ಸಹ ಅರ್ಥವು "ಕರ್ತನು" ಎಂದು. ಈ ಶಿರೋನಾಮೆಯು ಸದಾ ಕಾನಾನ್ಯರು, ಬಹಿಷ್ಕರಿಸಿದ ಪರಿಕಲ್ಪನೆಯ ಈ ದೇವತೆಗಳನ್ನು ಸೂಚಿಸಲು ಬಳಸುವವರಾಗಿದ್ದರು. ತಮ್ಮ ಶ್ರೇಷ್ಟವಾದ ಗಂಡು ದೇವತೆಗಳನ್ನು ಸೂಚಿಸಲೂ ಈ ಪದಪ್ರಯೋಗವನ್ನು ಬಳಸುವವರಾಗಿದ್ದರು. ಬಾಳನು ಸಮೃದ್ಧಿಯ: ಸೂರ್ಯ ದೇವತೆ, ಭೂದೇವತೆ, ಸಸ್ಯಗಳು, ಧಾನ್ಯಗಳು, ಗಾಳಿಯನ್ನು ನಿಯಂತ್ರಿಸುವ ದೇವತೆ, ಮರಣ, ಮತ್ತು ಕಾಲಗಳ ದೇವರಾಗಿದ್ದನು. ಕಾನಾನ್ಯರು ಒಳ್ಳೇಯ ಧಾನ್ಯಗಳನ್ನು ಹೊಂದಿದ್ದಾರೆ, ಯೆಹೋವನ ಬಗೆಗೆ ಯೋಚಿಸುತ್ತಲೇ ಇರಲಿಲ್ಲ; ಅವರು ಬಾಳನಿಗೋ ಅಥವಾ ಆತನ ಇತರ ದೇವತೆಗಳಿಗೋ ವಂದನೆಯನ್ನು ಸಲ್ಲಿಸುತ್ತಿದ್ದರು.

ಬಾಳನ ಆರಾಧನೆಯ ಬಹುದಿನದಿಂದ ಕಾನಾನ್ಯರ ಸಂಸ್ಕೃತಿಯ ಭಾಗವಾಗಿತ್ತು, ಆದರೆ ಇದೆಂದಿಗೂ ಇಸ್ರಾಯೇಲ್ಯರಲ್ಲಿ ಇದು ಪ್ರಮುಖ ಅಂಶವಾಗಿರಲಿಲ್ಲ. ಯಾರೊಬ್ಬಾಮನ ಬಂಗಾರದ ಕರುಗಳ ಮತ್ತು ಮರಗಳ ತೋಪುಗಳ ಜೊತೆ ಆರಾಧನೆಯು ಯೆಹೋವನ ಆರಾಧನೆಗೆ ವಿಶ್ವಾಸವನ್ನು ಬೆಳೆಯುವಂತೆ ಮಾಡುವದು ಆಗಿತ್ತು. ಈಗ ಇಜೆಬೇಲಳು ತನ್ನ ಮಿಶನರಿ ಉತ್ಕಟೇಚ್ಚೆಯ ಜೊತೆಬಂದಳು. ಸೊಲೊಮೋನನ ವಿದೇಶಿ ಹೆಂಡತಿಯರು ಯೆರೂಸಲೇಮಿನಲ್ಲಿ ಯೆಹೋವನ ಜೊತೆಯಲ್ಲಿ ತಮ್ಮ ದೇವರುಗಳನ್ನು ಇರಿಸಿ ಸಂತುಷ್ಟಗೊಳ್ಳುತ್ತಿದ್ದರು, ಆದರೆ ಇಜೆಬೇಲಳು ಹಾಗಲ್ಲ. ಅವಳು ನಂಬದೆ ದೇವರು ಒಬ್ಬನೇ ದೇವರೂ, ನಿಜವಾದ ದೇವರೂ ಆಗಿದ್ದನು ಎಂದು ಅವಳು ನಂಬಿದ್ದಳು; ಯೆಹೋವನ ಆರಾಧನೆಯನ್ನು ಆ ನೆಲದಿಂದ ನಿರ್ಮೂಲನಮಾಡುವುದೇ ಅವಳ ಆಶೆ ಆಗಿತ್ತು.

ಯೆಹೋವನ ದೇವಾಲಯವು ಕೆಡವಲ್ಪಟ್ಟಿತು. ಯೆಹೋವನ ಪ್ರವಾದಿಗಳನ್ನು ಕಾಡು ಪ್ರಾಣಿಗಳಂತೆ ಬೇಟೆಯಾಡುತ್ತಿದ್ದರು, ಮತ್ತು ಕೊಲ್ಲುತ್ತಿದ್ದರು ಅಥವಾ ಸೊಲ್ಲಡಗಿಸುತ್ತಿದ್ದರು. ಇಜಬೇಲಳು ಬಾಳನ 450 ಪ್ರವಾದಿಗಳನ್ನು ಮತ್ತು 400 ಅಶೇರು ದೇವತೆಗಳ ಪ್ರವಾದಿಗಳನ್ನೂ ತಂದಳು, ಫಲಶಕ್ತಿಯ ದೇವತೆ ಮತ್ತು ಬಾಳನ ಪ್ರತಿರೂಪವಾದ ಹೆಣ್ಣು ಆ ಭೂಮಿಯ ದೇವರೆಲ್ಲವುಗಳ ಪ್ರತಿನಿಧಿಗಳಿಂದ ಕೂಡಿಕೊಂಡು, ಬಾಳನ "ಸುವಾರ್ತೆಯನ್ನು" ಹರಡುವವರಾಗಿದ್ದರು. ಇಜಬೇಲಳು ತನ್ನ ದೇವಾಲಯವನ್ನು ಮತ್ತು ಆ ಸಮಾಧಿಯನ್ನೂ ಕಟ್ಟಿಸಿದಳು, ಮತ್ತು ಅವಳೂ ಅವಳ ದಾಸಿಯರೂ ಆ ಸಮಾಧಿಗಳಲ್ಲಿ ನಡೆಯುವ ಅಪವಿತ್ರ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಪ್ರಾರಂಭಿಸಿದರು.

ಈ ಸ್ತ್ರೀಯು ಏನು ಮಾಡಿದಳೆಂಬುದನ್ನು ನಾನು ಓದುತ್ತಿರುವಂತೆ, ಕೆಟ್ಟದ್ದಾಗಿ ಆಕೆಯು ಇದೆಲ್ಲವನ್ನೂ ಮಾಡಿದ್ದನ್ನು ಕಂಡು ಆಶ್ಚರ್ಯಪಡುವಾಗ ಒಳ್ಳೇಯದಕ್ಕಾಗಿ ನಾವು ಅದೇ ರೀತಿಯ ಉತ್ಕಟೇಚ್ಛೆಯನ್ನು ನಾವು ಹೊಂದಿಕೊಂಡಿದ್ದಾದರೆ ಯಾವುದನ್ನು ನೆರವೇರಿಸಬಹುದಲ್ಲವೇ? ನಾವು ಆಕೆಯ ಪದ್ಧತಿಯನ್ನು ಬಳಸಬೇಕಾಗಿಲ್ಲ, ಆದರೆ ದೇವರ ಮಾರ್ಗವೊಂದೇ ಮಾರ್ಗವು ಎಂದು ನಾವು ನಮ್ಮ ಹೃದಯದಿಂದ ನಂಬಿದ್ದಾದರೆ ಮತ್ತು ನಾವು ನಮ್ಮ ಎಲ್ಲಾ ದೋಷಪೂರಕ ಇರುವಿಕೆಯಿಂದ ಹೊರಬಂದಾಗ ದೇವರ ವಾಕ್ಯವು ಹರಡುತ್ತದೆ ಮತ್ತು ಸಮೃದ್ಧಗೊಳ್ಳುತ್ತದೆ!

ಹೇಗೋ, ನಾವು ಇಜೆಬೇಲಳ ಕೃತಿಗಳ ಜೊತೆಗೆ ಮುಗಿಸುವುದಿಲ್ಲ. ನಮ್ಮ ವೇದ ಭಾಗಕ್ಕೆ ಹಿಂತಿರುಗುವಾಗ, ಆಹಾಬನ ಮೇಲೆ ಪ್ರಭಾವಬೀರಿದ ಇಜೆಬೇಲಳ ವಿರಣೆಯತ್ತ ನೋಡೋಣ:

[ಅಹಾಬನು] ಆತನು ಬಾಳ್ ದೇವರನ್ನು ಪೂಜಿಸತೊಡಗಿದನು. ಬಾಳ ದೇವರಿ

> ಗೋಸ್ಕರ ಸಮಾರ್ಯದಲ್ಲಿ ಒಂದು ಗುಡಿ ಕಟ್ಟಿಸಿ ಅದರಲ್ಲಿ ಯಜ್ಞವೇದಿಯನ್ನು ಮಾಡಿಸಿದನು. ಇದಲ್ಲದೆ ಅಹಾಬನು ಅಶೇರ ವಿಗ್ರಹ ಸ್ತಂಭವನ್ನು ನಿಲ್ಲಿಸಿದನು (1 ಅರಸು 16:31ಬಿ-33ಎ).

ಅಹಾಬನ ಹೆಂಡತಿ ಬಲಶಾಲಿಯಾಗಿದ್ದಳು. ಆತನು ಅಶಕ್ತ ವ್ಯಕ್ತಿಯಾಗಿದ್ದನು ಎಂಬುದು ಈ ಚಿತ್ರಣದಿಂದ ಹೊರಹೊಮ್ಮುತ್ತದೆ. ಅವಳು ಮದುವೆಯಲ್ಲಿ ಪ್ರಭಲವಾದ ವ್ಯಕ್ತಿಯಾಗಿದ್ದಳು. ಆಕೆಯೇ ನಿರ್ಧಾರಗಳನ್ನು ಮಾಡಿದಳು. ಅಧ್ಯಾಯಗಳಲ್ಲಿ ಕಂಡುಬರುವಂತಹ ಘರ್ಷಣೆಗಳು ಎಲೀಯ ಮತ್ತು ಆಹಾಬರ ಘರ್ಷಣೆಯಾಗಿರಲಿಲ್ಲ ಬದಲಾಗಿ ಎಲೀಯ ಮತ್ತು ಇಜೆಬೇಲಳ ಘರ್ಷಣೆಯಾಗಿತ್ತು. ಇಜಬೇಲನು ಕೆಟ್ಟತನದ ಚಿನ್ಹೆಯಾದರೆ ಎಲೀಯನು ಒಳ್ಳೆಯತನವನ್ನು ಚಿನ್ಹೆಯಾಗಿದ್ದನು ಆಹಾಬನು ಇವರಿಬ್ಬರ ಮಧ್ಯ ಹಿಡಿಯಲ್ಪಟ್ಟಿದ್ದನು.

ಆಹಾಬನು ಪ್ರತಿಭಟಿಸಲಾಗದ ಒತ್ತಡದಲ್ಲಿ ಮತ್ತು ಮಿಸುಕಾಡಲಾರದ ಸಂಗತಿಗಳ ಮಧ್ಯದಲ್ಲಿ ಇದ್ದನು, ಅಂದರೆ ಎಲೀಯ ಮತ್ತು ಇಜೆಬೇಲಳ ಮಧ್ಯದಲ್ಲಿ ಹಿಡಿದಿಡಲ್ಪಟ್ಟದ್ದು, ಅಹಾಬನ ಬಗೆಗೆ ನಮಗೆ ಕರುಣೆ ಅನ್ನಿಸುತ್ತದೆ. ಒಂದು ವೇಳೆ ಆತನು ಬೇರೆ ಯಾರನ್ನಾದರೂ ಮದುವೆಯಾಗಿದ್ದರೆ ಆತನು ಏನು ಮಾಡುತ್ತಿದ್ದನು ಎಂದು ನಮಗೆ ಆಶ್ಚರ್ಯವಾಗುತ್ತದೆ. ಆತನ ಹೆಸರಿನ ಅರ್ಥವು "ನನ್ನ ಸಹೋದರನ ತಂದೆಯು" ಎಂಬುದಾಗಿದ್ದು ಸಾಮಾನ್ಯವಾಗಿ ಇದು "ಪರಲೋಕದ ತಂದೆಯು ನನ್ನ ಸಹೋದರ" ಎಂಬುದರ ಸಂಕ್ಷಿಪ್ತರೂಪವಾಗಿದೆ. ಆತನು ತನ್ನ ಮಕ್ಕಳಿಗೆ ಯೆಹೋವನಿಗೆ ಗೌರವ ಕೊಡುವ ನಿಟ್ಟಿನಲ್ಲಿ ಅಹಜ್ಯ ("ಯೆಹೋವು ಹಿಡಿದಿದ್ದಾನೆ") ಯೆಹೋರಾಮ ("ಯೆಹೋವನು ಉನ್ನತದಲ್ಲಿದ್ದಾನೆ"), ಮತ್ತು ಅಥಾಲಿಯಾ ("ಯೆಹೋವನು ಬಲವಾದವನು") ಎಂದು ಹೆಸರಿಟ್ಟಿದ್ದನು. ಒಂದು ಸಂಗತಿಯಲ್ಲಿ, ದೇವರ ಮುಂದೆ ಆತನು ಪ್ರಾಮಾಣಿಕನಾಗಿದ್ದನು ಎಂಬುದನ್ನು ನಾವು ನೋಡುತ್ತೇವೆ.

ವಿವಾಹವು ಮಾಡಲ್ಪಟ್ಟ ಸಮಯದಲ್ಲಿ, ಇದು ದೊಡ್ಡ ರಾಜಕೀಯ ಹೊಡೆತವಾಗಿ ಪರಿಗಣಿಸ್ಪಟ್ಟಿತು ಎಂಬುದರಲ್ಲಿ ಸಂಶಯವಿಲ್ಲ. ತೈರ್‌ವು ವೈಭವದ ಉತ್ತಂಗದಲ್ಲಿತ್ತು. ಇಸ್ರಾಯೇಲಿನ ರಾಜಕುಮಾರನು ತೈರ್‌ದ ಸುಂದರಳೂ ಮತ್ತು ವ್ಯವಹಾರ ಕುಶಲಿಯಾದ ತೈರದ ರಾಜಕುಮಾರಿಯನ್ನು ಅವಳ ಐಶ್ವರ್ಯದ ವರದಕ್ಷಿಣೆಯೊಂದಿಗೆ ವಿವಾಹವಾದದ್ದು ಯೋಜನಾ ಪೂರ್ವಕ ವ್ಯವಹಾರದ ನಿರ್ಧಾರ ಎಂದು ಪರಿಗಣಿಸಲ್ಪಟ್ಟಿತ್ತು. ಹೇಗೋ, ಈ ವಿವಾಹವು ಅಹಾಬನನ್ನು ನಾಶಮಾಡಿತು ಹಾಗೂ ರಾಷ್ಟ್ರವನ್ನೂ ಹೆಚ್ಚಾಗಿ ನಾಶಮಾಡಿತು.

ನಾವು ಯಾರನ್ನು ಮದುವೆಯಾಗುತ್ತೇವೆ ಎಂಬುದು ನಮ್ಮ ಜೀವಿತದಲ್ಲಿ ಏನನ್ನಾದರೂ ವ್ಯತ್ಯಾಸವನ್ನು ಉಂಟುಮಾಡುತ್ತದೆಯೋ? ಅದರಲ್ಲಿ ಸಂಶಯವೇ ಇಲ್ಲ. ನಾವು ಯಾರನ್ನು ವಿವಾಹವಾಗಬೇಕು ಎಂದು ಮಾಡಿದ ನಿರ್ಧಾರಗಳು ಇಲ್ಲಿನ ನಮ್ಮ ಸಂತೋಷದ ಮೇಲೆ ಮತ್ತು ನಮ್ಮ ಪರಲೋಕಕ್ಕಾಗಿನ ನಮ್ಮ ನಿರೀಕ್ಷೆಯ ಬಗೆಗೆ ನಾವು ತೆಗೆದುಕೊಂಡ ನಿರ್ಧಾರಕ್ಕಿಂತ ಮಿಗಿಲಾದವುಗಳು ಆಗಿವೆ.

ನಂತರ "ಹೀಗೆ ಇನ್ನೂ ಎಷ್ಟೋ ಕೆಲಸಗಳನ್ನು ಮಾಡಿ ಮುಂಚೆ ಇದ್ದ ಎಲ್ಲಾ ಇಸ್ರಾಯೇಲ್ ರಾಜರಿಗಿಂತಲೂ ಹೆಚ್ಚಾಗಿ ಇಸ್ರಾಯೇಲ್ ದೇವರಾದ ಯೆಹೋವನನ್ನು ರೇಗಿಸಿದನು" ಎಂದು 33ನೇ ವಚನದ ಮುಂದಿನ ಭಾಗವನ್ನು ಓದುವಾಗ ನಮಗೆ ಆಶ್ಚರ್ಯವಾಗದು.

ಈ ವಚನವು ಹೃದಯದ ನೋವಿನಿಂದ ಹೊರಹಾಕಲಾರದೆ ನಿಟ್ಟಿಸುರಿನಿಂದ ಮುಗಿಯುತ್ತದೆ. ನಿಜವಾದ ದೇವರಲ್ಲಿನ ನಂಬಿಕೆಯ ಮಿಣುಕು ದೀಪವನ್ನು ನಂದಿಸಿಬಿಟ್ಟಿತು. ಒಬ್ಬ ಬೋಧಕರು ಈ ಪ್ರಸಂಗದ ಸಾರಾಂಶವನ್ನು ಹೀಗೆ ಹೇಳುತ್ತಾರೆ. "ಕಪ್ಪೆಯೊಂದು ಸಿಂಹಾಸನದ ಮೇಲೆ ಪದ್ಮಾಸನ ಹಾಕಿಕೊಂಡು ಕುಳಿತಿತ್ತು; ವಿಷಸರ್ಪವು ಆತನ ಬದಿಯಲ್ಲಿ ಸುತ್ತಿಕೊಂಡು ಕುಳಿತಿತ್ತು." ಆ ಪ್ರದೇಶದ ತುಂಬೆಲ್ಲಾ ಬಾಳನ ಸೇವಕರು

ತುಂಬಿತುಳುಕುತ್ತಿದ್ದರು. ಇಸ್ರಾಯೇಲಿನ ಜನರ ಗತಿಯೇನು? ಅವರು ಎರಡು ವಿಚಾರಗಳ ಮಧ್ಯದಲ್ಲಿ ಅತಂತ್ರರಾಗಿ ನಿಂತರು. ರಾಜಕೀಯ ಆಲೋಚನಾಕರ್ತರು ಹೇಳುವುದೇನೆಂದರೆ, "ಗೊಂದಲವನ್ನು ಕೆದಕಬೇಡಿ; ಮಾಡಬೇಕಾದ ಅಗ್ರವಾದ ಸಂಗತಿಯಂದರೆ ಸುಮ್ಮನಿರುವುದೇ." ಸಂಧಾನವು ತಾಳ್ಮೆಯೆಂಬ ಬಹುಮಾನದ ಸುತ್ತಳೆಯಲ್ಲಿ ಬಂದಿದೆ.

ಏಳು ಸಾವಿರ ಜನರು ಬಾಳನಿಗೆ ಅಡ್ಡಬೀಳಲಿಲ್ಲ ಮತ್ತು ಆತನ ಮೂರ್ತಿಗೆ ಮುತ್ತುಕೊಡಲಿಲ್ಲ, ಆದರೆ ಅವರ ತುಟಿಗಳಿಂದ ಅಳು ಹೊರಬರಲಿಲ್ಲ. ಯೆಹೋವನ ಒಂದು ನೂರು ಪ್ರವಾದಿಗಳು ಇನ್ನೂ ಜೀವಂತರಾಗಿದ್ದರು, ಆದರೆ ಅವರು ನಡುಗುತ್ತಾ, ತಮ್ಮ ಮೆಟ್ಟುಗಳನ್ನು ಅಲುಗಾಡಿಸುತ್ತಾ, ದೂರದಲ್ಲಿನ ಕತ್ತಲಾದ ಗುಹೆಯಲ್ಲಿ ಅಡಗಿಕೊಂಡಿದ್ದರು.

ಯೆಹೋವನಿಗಾಗಿ ನಿಲ್ಲುವವರಾರು?

ದೇವರ ಮನುಷ್ಯನು ಇಸ್ರಾಯೇಲಿನಲ್ಲಿ ಎಲ್ಲಿದ್ದಾನೆ?

ಕ್ರೂರನಾದ ಅಹಾಬ ಮತ್ತು ಇಜೆಬೇಲ ಮತ್ತು ಅವರ ಪೂಜಾರಿಗಳ ಸೇನೆಯ ಮುಂದೆ ಯಾರಾದರು ನಿಲ್ಲಬಹುದೇ?

ಇಂದು ಆ ಪ್ರಶ್ನೆಗಳ ಮೇಲೆ ಬೆಳಕು ಬೀರುವಂಥದನ್ನು ನಾವು ಕಂಡುಕೊಂಡಿದ್ದೇವಾ? ನಮ್ಮ ಸುತ್ತಮುತ್ತಲೂ ಅನೈತಿಕತೆ ಮತ್ತು ತಪ್ಪು ಧರ್ಮಗಳಿವೆ. ಕ್ರೈಸ್ತರಾಗಿರುವದು ನಮ್ಮ ಸುತ್ತುವರೆದ ವೈಲಕ್ಷಣಗಳೊಂದಿಗೆ ಚೆನ್ನಾಗಿ ಹೊಂದಿಕೊಂಡು ತಾರತಮ್ಯ ಮಾಡುವವರಾಗಿರುತ್ತಾರೆ ಎಂದು ವಾದಿಸುವವರಾಗಿದ್ದಾರೆ. ಧಾರ್ಮಿಕತೆಯು ನಮ್ಮಲ್ಲಿ ತಳಮಟ್ಟದಲ್ಲಿದೆ. ನಮ್ಮಲ್ಲಿ ಅನೇಕರು ನಮ್ಮ ವ್ಯವಹಾರ ಬಂಜರುತನದ ಗುಣಲಕ್ಷಣಗಳಲ್ಲಿ ಜೀವಿಸುವವರಾಗಿದ್ದಾರೆ.

ಕರ್ತನಿಗಾಗಿ ಎದ್ದು ನಿಲ್ಲುವವರು ಯಾರು? ಯಾರು?

ಅಧ್ಯಾಯ 16 ಸಂಪೂರ್ಣವಾಗಿ ಅಸಂಭಂಧಿತ ಘಟನೆಗಳನ್ನು ಹೇಳುವುದರ ಈ ವಿಚಿತ್ರ ಚಿಕ್ಕ ವಚನದ ಮೂಲಕ ಕೊನೆಗೊಳ್ಳುತ್ತದೆ.

> ಇವನ ಕಾಲದಲ್ಲಿ ಬೇತೇಲಿನವನಾದ ಹೀಯೇಲನು ಯೆರಿಕೋಪಟ್ಟಣವನ್ನು ಕಟ್ಟಿಸಿದನು. ಅವನು ಅದಕ್ಕೆ ಅಸ್ತಿವಾರ ಹಾಕುವಾಗ ಹಿರೀ ಮಗನಾದ ಅಭೀರಾಮನನ್ನೂ ಬಾಗಲುಗಳನ್ನಿಡುವಾಗ ಕಿರೀಮಗನಾದ ಸೆಗೂಬನನ್ನೂ ಕಳಕೊಂಡನು. ಹೀಗೆ ಯೆಹೋವನು ನೂನನ ಮಗನಾದ ಯೆಹೋಶುವನಿಂದ ಹೇಳಿಸಿದ ಮಾತು ನೆರವೇರಿತು (ವಚನ 34).

ನಾವು ತಿರುಗಿ ನೋಡಿಕೊಳ್ಳುವಾಗ, ನಾವು "ಕರ್ತನ ಮಾತಿನಂತೆ" ಎಂಬ ವಾಕ್ಯಗಳ ಕಡೆಗೆ ನೋಡುವಾಗ. ಎಚ್ಚರಿಕೆಯ ಧ್ವನಿಯಿಂದ ಸ್ಫೂರ್ತಿಯು ಬಂದದ್ದು ನಿಜ.[1] ಲೇಖಕರು ದೇವರು ಇನ್ನೂ ಇದ್ದಾನೆ ಮತ್ತು ಆತನು ಕಾರ್ಯನಿರತನಾಗಿದ್ದಾನೆ ಎಂದು ನಮಗೆ ತಿಳಿಸುವವನಾಗಿದ್ದಾನೆ.

ಹೀಗೆ ನಾವು 17ನೇಯ ಅಧ್ಯಾಯದ ಮೊದಲ ವಚನಕ್ಕೆ ಬರೋಣ:

> ಗಿಲ್ಯಾದಿನ ಪ್ರವಾಸಿಗಳಲ್ಲಿ ತಿಷ್ಬೀಯನಾದ ಎಲೀಯ ಎಂಬವನು ಆಹಾಬನಿಗೆ - "ನಾನು ಸನ್ನಿಧಿ ಸೇವೆ ಮಾಡುತ್ತಿರುವ ಇಸ್ರಾಯೇಲ ದೇವರಾದ ಯೆಹೊವನಾಣೆ, ನಾನು ಸೂಚಿಸಿದ ಹೊರತು ಇಂದಿನಿಂದ ಕೆಲವು ವರುಷಗಳವರೆಗೆ ಮಳೆಯಾಗಲಿ ಮಂಜಾಗಲಿ ಬೀಳುವುದಿಲ್ಲ ಅಂದನು."

ಇಲ್ಲಿನ ಪ್ರಮುಖ ಮಾತುಗಳು ಎಂದರೆ "ಎಲೀಯನು ... ಹೇಳಿದನು ..."

## ಇಸ್ರಾಯೇಲ್ಯರಲ್ಲಿ ದೇವರ ಮನುಷ್ಯ

ದೇವರು ಇಸ್ರಾಯೇಲ್ಯರಲ್ಲಿ ತನ್ನ ಮನುಷ್ಯನನ್ನು ಹೊಂದಿದ್ದನು, ಆತನ ಹೆಸರು

ಎಲೀಯ.

ಈ ಎಲೀಯನು ಯಾರು? ಈ ವಿವರಣೆಯನ್ನು ಓದುವ ಮೊದಲು ಆತನ ಬಗೆಗೆ ನಾವು ಏನನ್ನೂ ಓದಿರಲಿಲ್ಲ, ಆದರೆ ಆತನು ಒಮ್ಮೆಲೇ ಅಂಕಣದ ಮೇಲೆ ಬರುತ್ತಾನೆ, ಅರಸ ಮತ್ತು ರಾಣಿಗೆ, ರಾಜ್ಯದ ಧರ್ಮಕ್ಕೆ, ಬಾಳನ ಪ್ರವಾದಿಗಳಿಗೆ ಮತ್ತು ಇಡೀ ದೇಶಕ್ಕೆ ಸವಾಲನ್ನು ಎಸೆಯುವ ಮೂಲಕ!

ನಮಗೆ ಎಲೀಯನ ಬಗೆಗೆ ಅಲ್ಪವಾಗಿ ತಿಳಿದಿದೆ. ಆತನ ಕುಟುಂಬದ ಬಗೆಗೆ, ಅಥವಾ ಆತನ ಬಾಲ್ಯದ ಬಗೆಗೆ, ಅಥವಾ ಯೆಹೋವನಿಂದ ನಿಯೋಗವನ್ನು ಹೇಗೆ ಪಡೆದನು ಎಂಬುದರ ಬಗೆಗೆ ನಮಗೆ ತಿಳಿದಿಲ್ಲ. ಹೇಗೋ, ನಾವು ತಿಳಿದಿರುವ ಅಲ್ಪವಾದದ್ದೇ ನಿಜವಾಗಿಯೂ ಗುರುತರವಾದದ್ದು.

ಎಲೀಯನು "ಗಿಲ್ಯಾದಿನ ಪ್ರವಾಸಿಗಳಲ್ಲಿ ತಿಷ್ಬೀಯನಾದ ..." "ತಿಷ್ಬೀಯ" ಇದು ಗಿಲ್ಯಾದಿನಲ್ಲಿದ್ದು ಆತನು ತಿಷ್ಬೆಯ ಎಂದು ಕರೆಯಲ್ಪಡುವ ಯಾವುದೇ ಒಂದು ಹಳ್ಳಿಯಿಂದ ಬಂದಿರಬಹುದು ಎಂದರ್ಥ ಕೊಡುತ್ತದೆ. ಗಿಲ್ಯಾದು ಒರಟಾದ, ಅಸಂಸ್ಕೃತವಾದ ದೇಶವಾಗಿದ್ದು ಯೋರ್ದನಿನ ಪೂರ್ವದಲ್ಲಿ ಸ್ಥಿತಿಹೊಂದಿದೆ. (27 ನೇ ಪುಟದಲ್ಲಿನ ನಕಾಶೆಯನ್ನು ನೋಡಿರಿ.) ಇದು ಹಾಳುಬಿದ್ದ ಮತ್ತು ನಿರ್ಜನವಾದ ಪ್ರದೇಶವಾಗಿತ್ತು, ಅಲ್ಲಿನ ಪಟ್ಟಣಗಳಿಗೆ ಗೋಡೆ ಇರಲಿಲ್ಲ, ಹೆಚ್ಚಿನ ನಿವಾಸಿಗಳು ಗುಡಾರಗಳಲ್ಲಿ ಇರುತ್ತಿದ್ದರು ಮತ್ತು ಕುರಿಹಿಂಡು ಅಥವಾ ಕಾಡುದನಗಳನ್ನು ಕಾಯುವವರಾಗಿದ್ದರು. ಅರೆನಾಗರೀಕರಾದ ಆ ಜನಾಂಗಕ್ಕೆ ಯಾವುದೇ ಮೆರಗೂ ಕುಶಲಮತಿಯು ಇರಲಿಲ್ಲ.

ದೇವರು ಅಹಾಬ ಮತ್ತು ಇಜೆಬೇಲಳನ್ನು ಮೆಚ್ಚಿಸಲು ನೀಲವರ್ಣದ ಪೋಷಾಕು ಧರಿಸಿದ ಮೃದುಭಾಷಿಯಾದ ರಾಜಕುಮಾರನನ್ನು ಆರಿಸಲಿಲ್ಲ ಎಂಬುದು ಕೌತುಕಮಯವಾದ ಸಂಗತಿ. ಬದಲಾಗಿ, ಅರಣ್ಯದ ವಿಶ್ವವಿದ್ಯಾಲಯದಲ್ಲಿ ಅಭ್ಯಾಸಮಾಡಿದ M.S. ನಲ್ಲಿ "ಏಕಾಂತತೆಯಲ್ಲಿ ಪರಿಣಿತನಾದ ಒರಟು ತನದಲ್ಲಿ ತನ್ನ ಪದವಿಯನ್ನು ಪಡೆದವನನ್ನು ಆರಿಸಿದನು.

ಎಲೀಯನು, "ರೋಮಗಳುಳ್ಳ ಮನುಷ್ಯನೂ ಸೊಂಟಕ್ಕೆ ತೊಗಲಿನ ನಡಕಟ್ಟು [ಅಥವಾ ಕಾಡಿನ ಚರ್ಮದ ನಡಕಟ್ಟು] ಹೂಡಿ ಪ್ರಯಾಣಕ್ಕೆ ಹೊರಟ ಸಿಂಹದಂತೆ ಇದ್ದನು" ಎಂದು ವರ್ಣಿಸಲ್ಪಟ್ಟಿದ್ದಾನೆ (2 ಅರಸು 1:8). ಕೂದಲುಗಳಿಂದ ಮಾಡಲ್ಪಟ್ಟ ಒರಟಾದ ಬಟ್ಟೆಯನ್ನು ಆತನು ಧರಿಸಿದ್ದನು (ಜೆಕರ್ಯ 13:4). ಸ್ನಾನಿಕನಾದ ಯೋಹಾನನು ಎಲೀಯನ ಆತ್ಮದಲ್ಲಿ ಬಂದಾಗ, ಆತನು ಚರ್ಮದ ಸೊಂಟದ ಪಟ್ಟಿಯನ್ನು ಮತ್ತು ಒಂಟೆಯ ಕೂದಲಿನಿಂದ ಮಾಡಿದ ಬಟ್ಟೆಗಳನ್ನು ಧರಿಸಿದನು ಮತ್ತು ಊರಹೊರಗೆ ಇರುತ್ತಿದ್ದನು ಮಿಡತೆ ಮತ್ತು ಕಾಡುಜೇನನ್ನು ತಿನ್ನುತ್ತಿದ್ದನು (ಮತ್ತಾಯ 3:4).

ಎಲೀಯನನ್ನು ನಾವು ಈ ರೀತಿಯ ರೂಪದಲ್ಲಿ ಆತನನ್ನು ಕಾಣಬೇಕು, ಕಾಡು ರೀತಿಯ ರೂಪ ಒರಟಾದ ಬಟ್ಟೆ, ಒರಟಾದ ಕೂದಲು; ಒಪ್ಪ ಓರಣವಿಲ್ಲದ ಗಡ್ಡ; ಹಳೆಯ ಚರ್ಮದಬಣ್ಣದ ಚರ್ಮದ ಕಲೆಗಳು, ದಷ್ಟಪುಷ್ಟವಾದ ಮಾಂಸಖಂಡಗಳು, ಗಿಲ್ಯಾದಿನ ಕಾಡುಜೀವನದಲ್ಲಿ ಆತನ ದೇಹವು ಒಬ್ಬ ಓಟಗಾರನ ದೇಹದಂತೆ ಗಟ್ಟಿಯಾಗಿ ಬಿಗಿತಗಳನ್ನು ಹೊಂದಿತ್ತು, ಆತನ ದೇಹವು ಕುದುರೆಗಿಂತಲೂ ಜೋರಾಗಿ ಓಡುವ ಸಾಮಾರ್ಥ್ಯವನ್ನು ಹೊಂದಿತ್ತು. ಆತನ ಕಣ್ಣುಗಳು ಜೀವಿಸುವ ದೇವರಿಗಾಗಿ ಹೊಳೆಯುವ ಉತ್ಕಟೇಚ್ಛೆಯನ್ನು ಹೊಂದಿತ್ತು; ಆತನ ಹೆಗಲಿನ ಮೇಲೆ ಕಂಬಳಿಯನ್ನು ಹಾಕಿಕೊಂಡಿದ್ದನು, ಉಣ್ಣೆಯಿಂದ ಅಥವಾ ಪ್ರಾಣಿಯ ಚರ್ಮದಿಂದ ಮಾಡಿದ ಕಂಬಳಿಯು ಜೋತುಹಾಕಿತ್ತು. ಇದು ಆತನ ಕಾರ್ಯದ ಚಿಹ್ನೆಯಾಗಿಯೂ ಮತ್ತು ಅದರ ಮೂಲಕವಾಗಿ ಆತನ ಅನೇಕ ಅದ್ಭುತಗಳಲ್ಲಿ ಸಾಧನವಾಗಿಯೂ ಉಪಯೋಗಿಸಿದನು.

ದೇವರ ಮಾರ್ಗಗಳು ನಮ್ಮ ಮಾರ್ಗಗಳಲ್ಲ. ಮನುಷ್ಯನು ನೋಡಿದಂತೆ ದೇವರು

ನೋಡುವುದಿಲ್ಲ. ಯಾವಾಗಲೂ ನಾವು ಹೇಳುವಂತೆ "ನಾನು ಯೋಗ್ಯನಲ್ಲ. ಕರ್ತನಾಗಿ ಇದನ್ನು ಅಥವಾ ಅದನ್ನು ಮಾಡನು ನಾನು ಸಿದ್ಧನಿಲ್ಲ. ನಾನು ಆ ನಯವನ್ನು ಹೊಂದಿಲ್ಲ. ನಾನು ಶಿಕ್ಷಣವನ್ನು ಹೊಂದಿಲ್ಲ" ಎಂದು ಹೇಳಬಹುದು. ದೇವರು ಏನನ್ನು ನೋಡುವವನಾಗಿದ್ದಾನೆ. ಹೇಗೋ ಆ ಹೃದಯವು ಅವನಲ್ಲಿ ನೆಲೆಗೊಂಡಿರುತ್ತದೆ, ಆ ಹೃದಯವು ಉತ್ಕಟೇಚ್ಛೆಯ ಜೊತೆ ಉರಿಯುತ್ತಿರುತ್ತದೆ ಎಲೀಯನ ಹೃದಯದಂತೆ ಈಗ ಕಾಡು ರೀತಿಯಲ್ಲಿರುವ ಈ ಪ್ರಾಣಿ ಅರಸನ ಮುಂದೆ ನಿಂತುಕೊಂಡು ಈ ಸವಾಲನ್ನು ಎಸೆಯುತ್ತಿದ್ದಾನೆ.

"ನಾನು ಸನ್ನಿಧಿ ಸೇವೆ ಮಾಡುತ್ತಿರುವ ಇಸ್ರಾಯೇಲ ದೇವರಾದ ಯೆಹೋವನಾಣೆ, ನಾನು ಸೂಚಿಸಿದ ಹೊರತು ಇಂದಿನಿಂದ ಕೆಲವು ವರುಷಗಳವರೆಗೆ ಮಳೆಯಾಗಲಿ ಮಂಜಾಗಲಿ ಬೀಳುವದಿಲ್ಲ" (1 ಅರಸು 17:1ಬಿ).

ಎಲೀಯನು ಮಾಡಿದ ಸವಾಲುಗಳ ಬಗೆಗೆ ಮೂರು ಸಂಗತಿಗಳನ್ನು ಗಮನಿಸಿರಿ:

(1) ಇದು ಅರಸನಿಗಾಗಿ ಮಾಡಿದ ಸವಾಲಾಗಿದೆ. ಎಲೀಯನು ಮೊದಲು ಮೂಲಕ್ಕೆ ಹೋಗಿ ದೇವರಿಲ್ಲದ ಧರ್ಮವನ್ನು ನಿರ್ಮೂಲ ಮಾಡಲು ಚಾಲನೆ ನೀಡಿದನು.

(2) ಇದು ಬಾಳನಿಗೆ ವಿರುದ್ಧವಾದ ಸವಾಲಾಗಿತ್ತು. ಬಾಳನು ಅವರ ಸೃಷ್ಟಿಯ ದೇವತೆಯಾಗಿದ್ದನು. ಬಾಳನು ಮಳೆಯನ್ನು ಮಂಜನ್ನು ನಿಯಂತ್ರಿಸುವವನು ಎಂದು ಅವರು ತಿಳಿದಿದ್ದರು. ಅಂತೆಯೇ ಎಲೀಯನು "ಮಳೆಯಿಂದ ಉತ್ತರಿಸುವವನು, ಯಾರೋ ಅವನೇ ದೇವರು!" ಎಂದು ಹೇಳಿದನು.

(3) ಇದು ಒಬ್ಬ ಮನುಷ್ಯನು ಒಬ್ಬೊಂಟಿಗನಾಗಿ ನಿಂತುಕೊಂಡು ಮಾಡಿದಂತಹ ಸವಾಲಾಗಿದೆ. ಯಾವಾಗಲೂ ಆತನ ಜೀವಿತದ ನಮ್ಮ ಅಧ್ಯಾಯನದಲ್ಲಿ ಎಲೀಯನು ಯಾವುದೇ ಸ್ನೇಹಿತರಿಲ್ಲದೇ, ಸಂಗಾತಿಗಳಿಲ್ಲದೇ, ಅಥವಾ ಜೊತೆ ಕೆಲಸದವರಿಲ್ಲದೇ, ಬಲವನ್ನು ತಂದು ಕೊಡುವ ಬೆಂಬಲಿಗರ ಗುಂಪಿಲ್ಲದೇ ಒಬ್ಬನೇ ದೊಡ್ಡ ಪ್ರತಿರೋಧದ ವಿರುದ್ಧ, ಮರಣದ ಅಪಾಯದೊಂದಿಗೆ ಒಬ್ಬನೇ ನಿಂತಿರುವುದನ್ನು ಕಾಣುತ್ತೇವೆ.

ನಮ್ಮಲ್ಲಿ ಅನೇಕರು ಎಲೀಯನನ್ನು ಈ ಗೌರವದೊಂದಿಗೆ ಗುರುತಿಸುತ್ತೇವೆ. ಒಂದು ಸಂದರ್ಭದಲ್ಲಿ ನಾವು ಕೆಲಸಮಾಡುವ ಸ್ಥಳದಲ್ಲಿ, ನಾವು ಶಾಲೆಗೆ ಹೋಗಬೇಕಾದಾಗ, ನಮ್ಮ ನೆರೆಹೊರೆಯಲ್ಲಿ, ಬಹುಶಃ ನಮ್ಮ ಮನೆಯಲ್ಲಿ, ನಾವು ಹಾಜರಾಗುವ ಸಭೆಗಳಲ್ಲಿಯೂ ಕೂಡಾ ಒಬ್ಬಂಟಿಗರಾಗಿ ನಿಲ್ಲಬೇಕಾಗಬಹುದು. ಇದು ಕಷ್ಟಮಯವಾದ್ದು, ಹೌದಲ್ಲವೇ?

ಇಂಥ ಪ್ರತಿರೋಧಗಳ ವಿರುದ್ಧ ಒಬ್ಬಂಟಿಗನಾಗಿ ನಿಲ್ಲಲು ಯಾವದು ಎಲಿಯನನ್ನು ಸಮರ್ಥನನ್ನಾಗಿಸಿತು? ಅದಕ್ಕೆ ಉತ್ತರ ಅವನು ಒಬ್ಬಂಟಿಗನಾಗಿರಲಿಲ್ಲ. ನಮ್ಮ ವೇದಭಾಗವು ಹೇಳುವಂತೆ, "ಎಲೀಯನು ಆತ್ಮವಿಶ್ವಾಸವನ್ನು ಹೊಂದಿರಲಿಲ್ಲ, ಆದರೆ ಯೆಹೋವನ ವಿಶ್ವಾಸವನ್ನು ಹೊಂದಿದ್ದನು. ಆತನು ಎಲೀಯನ ಮೇಲೆ ಆತುಕೊಂಡಿರಲಿಲ್ಲ ಆದರೆ ಸೃಷ್ಟಿಯ ಕರ್ತನನ್ನು ಆತನು ಆತುಕೊಂಡಿದ್ದನು."

ಈ ಮನುಷ್ಯನ ಬಗೆಗೆ ನಮಗೆ ನಾವು ಅಲ್ಪವಾಗಿ ತಿಳಿದಿದ್ದೇವೆ ಎಂದು ನಮಗೆ ಹೇಳಲ್ಪಟ್ಟಿದೆ, ಆದರೆ ಒಂದು ಸಂಗತಿಯು ನಿಜ. ಆತನು ದೇವರ ಮಾರ್ಗದಲ್ಲಿ ಎತ್ತಿಹಿಡಿಯುವ, ದೇವರನ್ನು ಪ್ರೀತಿಸುವ ಪಾಲಕರನ್ನು ಆತನು ಹೊಂದಿದ್ದನು. ಅದನ್ನು ನಾವು ಯಾಕೆ ಹೇಳುತ್ತಿದ್ದೇನೆ? ಆದ ಕಾರಣವೇ ಅವರು ಆತನಿಗೆ ಆ ಹೆಸರನ್ನು ಕೊಟ್ಟರು. "ಎಲೀಯ" ಇದೊಂದು ಸಂಯುಕ್ತಪದವಾಗಿದೆ. "ಎಲ್" ಇದೊಂದು "ದೇವರು" ಎಂಬುದರ ಇಬ್ರಿಯ ಪದವಾಗಿದೆ. "ಝಾ" ಅಥವಾ ("ಯಾ") ಎಂಬುದು "ಯೆಹೋವಾ" (ಜೆಹೋವಾ) ಎಂಬುದರ ಮೊಟಕುಮಾಡಿದ ರೀತಿಯಿದಾಗಿದೆ. ಇದರಲ್ಲಿನ "ನಾನು" ಇಬ್ರಿಯದಲ್ಲಿ ಸರ್ವನಾಮವಾದ "ನನ್ನ," "ನನ್ನದು" ಎಂಬವುಗಳನ್ನು ಸೂಚಿಸುವುದಾಗಿದೆ. ಆತನ ಹೆಸರಿನ ಅಕ್ಷರ ಸಹ ಅರ್ಥವು "ನನ್ನ ದೇವರು ಬಾಳನಲ್ಲ, ಅಹಾಬನೂ ಅಲ್ಲ, ಆದರೆ ಯೆಹೋವನು" ಎಂದೆ.

ಇದು ಆತನ ಹೆಸರು ಯೆಹೋವನ ಮೇಲೆ ಆತುಕೊಂಡಿರುವುದನ್ನು ಸೂಚಿಸವುದಾಗಿದೆ.

ಈ ಸಂದರ್ಭದಲ್ಲಿ ಆತನು ಹೇಳಿದ್ದೂ ಕೂಡಾ ನಮಗೆ ಆತನ ಕರ್ತನಲ್ಲದ್ದ ದೃಢತೆಯನ್ನು ನಮಗೆ ಹೇಳುವಂತದ್ದಾಗಿದೆ: "ನಾನು ಸನ್ನಿಧಿ ಸೇವೆ ಮಾಡುತ್ತಿರುವ ಇಸ್ರಾಯೇಲ ದೇವರಾದ ಯೆಹೋವನಾಣೆ ... ಆಳವಾದ ಅರ್ಥವು ಈ ಪದಗಳೊಂದಿಗೆ ಹೊಂದಿಕೊಂಡಿದೆ."

ಎಲೀಯನು, "ಯೆಹೋವನು ಜೀವಿಸುವ ದೇವರಾಗಿದ್ದಾನೆ, ಸತ್ತಂತ ಯಾವುದಕ್ಕೂ ಬಾರದ ಮೂರ್ತಿ ದೇವತೆಗಳಿಗೆ ಹೋಲಿಸಿದ್ದಾದರೆ ನಮ್ಮ ದೇವರು ಸತ್ತದೇವರಲ್ಲ" ಎಂದು ಹೇಳಿದ್ದಾನೆ.

ನಾನು ಜೀವಿಸುವ ದೇವರ ಮುಂದೆ ನಿಂತಿದ್ದೇನೆ. "ಅಹಾಬನೇ, ನಾನು ನಿನ್ನ ಸನ್ನಿಧಿಯಲ್ಲಿದ್ದಾಗಲೂ ನಾನೂ ಆತನ ಸನ್ನಿಧಿಗಾಗಿ ನಾನು ಎಚ್ಚರಿಕೆಯುಳ್ಳವನಾಗಿದ್ದೇನೆ ಎಂದು ಎಲೀಯನು ಹೇಳುತ್ತಾನೆ."

"ನಾನು ಆತನ ಮುಂದೆ ಸೇವಕನಂತೆ ನಿಂತಿದ್ದೇನೆ, ಆತನ ಅಪ್ಪಣೆಯನ್ನು ಪಾಲಿಸಲು, ನಿನ್ನದಲ್ಲ. ಆತನ ಪ್ರತಿನಿಧಿಯಾಗಿ ನಾನು ನಿನ್ನ ಮುಂದೆ ನಿಂತಿದ್ದೇನೆ."

"ನಾನು ದೇವರಿಗೆ ಭಯಪಡುವೆನು; ಆದರೆ ನಿನಗೆ ಭಯಪಡುವುದಿಲ್ಲ" ಎಂದು ಎಲೀಯನು ಹೇಳುತ್ತಿದ್ದಾನೆ.

ಹೌದು, ದೇವರು ಇಸ್ರಾಯೇಲ್ಯರಲ್ಲಿ ತನ್ನ ಮನುಷ್ಯನನ್ನು ಹೊಂದಿದ್ದಾನೆ.

## ಮುಕ್ತಾಯ

ಈಗ ಈ ಪಾಠವನ್ನು ನಾವು ವೈಯಕ್ತಿಕವಾಗಿ ಅನ್ವಯಮಾಡಿಕೊಳ್ಳೋಣ.

ದೇವರಿಗೆ ಈ ವಿಶೇಷ ಸಮಯಗಳಿಗಾಗಿ ಇನ್ನೂ ಆತನಿಗೆ ವಿಶೇಷ ಸ್ತ್ರೀಯರ, ಪುರುಷರ, ಬಾಲಕರ, ಬಾಲಕಿಯರ ಅವಶ್ಯಕತೆಯಿದೆ. ಆತನು ಇನ್ನೂ ಕಠಿಣಮಯವಾದ ದಿನಗಳಲ್ಲಿ ತನಗಾಗಿ, ಒಬ್ಬಂಟಿಗರಾಗಿ ನಿಲ್ಲುವಂಥವರ ಬಗೆಗೆ ಎದುರು ನೋಡುತ್ತಿದ್ದಾನೆ. ತಂದೆಗಳು, ತಾಯಂದಿರು, ಗಂಡಂದಿರು, ಹೆಂಡತಿಯರು, ಮಗನು, ಮಗಳು, ಕಾರ್ಮಿಕರು, ಕೂಲಿಯಾಳು, ನಿವೃತ್ತಿ ಹೊಂದಿದವರು, ವಿದ್ಯಾರ್ಥಿಗಳು, ಚಿಕ್ಕಮಕ್ಕಳು, ತರುಣರು, ಪ್ರಾಯಸ್ಥರು ಯೌವನಸ್ಥರು, ವೃದ್ಧರು, ಮಧ್ಯವಯಸ್ಕರು, ಹೀಗೆ ದೇವರು ನಿಮ್ಮನ್ನು ತನ್ನ ವಿಶೇಷ ಜನರಾಗಿರಬೇಕೆಂದು ಬಯಸುವವನಾಗಿದ್ದಾನೆ. ಸಮರ್ಪಿತ ಜೀವನವು ದೇವರಿಗಾಗಿ ಏನೆಲ್ಲ ಸಾಧನೆ ಮಾಡುವದು ಎಂಬುದನ್ನು ಎಲೀಯನ ಆ ಜೀವನವು ತೋರಿಸುತ್ತದೆ ಎಲೀಯನ ಜೀವಿತವು ಒಂದು ಜೀವಿತವು ದೇವರಿಗೆ ಸಮರ್ಪಣೆ ಮಾಡಿ ಪೂರೈಸುವುದನ್ನು ತೋರಿಸುವದಾಗಿದೆ.

ಎಲೀಯನ ಜೀವಿತವು ಯಾವನು ತನ್ನನ್ನು ತಾನು ಸಂಪೂರ್ಣವಾಗಿ ಅರ್ಪಿಸಿಕೊಳ್ಳುತ್ತಾನೋ ಅವನನ್ನು ದೇವರು ಬಳಸುವವನಾಗಿದ್ದಾನೆ, ಯಾವುದೇ ಹಿಡಿತವಿಲ್ಲದೇ, ಯಾವುದೇ ಭಯಕ್ಕೆ ಲಕ್ಷಕೊಡದೇ ಆತನ ಚಿತ್ತವನ್ನು ನಡೆಸಲು ಸದಾಸಿದ್ಧ ನಾಗಿರುವವನನ್ನು ಬಳಸುತ್ತಾನೆ ಎಂಬುದನ್ನು ಸಹ ತೋರಿಸುವುದಾಗಿದೆ. ನೀನು ಅಂಥರಲ್ಲಿ ಒಬ್ಬನಾಗಬಯಸುವಿಯಾ?

---

ಟಿಪ್ಪಣಿ

[1]ಈ ಶಾಪವು ಯೆಹೋಶುವ 6:26ರಲ್ಲಿ ದಾಖಲಿತವಾಗಿದೆ.

---

## ಪಾಠದ ರೂಪರೇಖೆ

**ಪರಿಚಯ**

A. ನಾವು ಹಳೆಯ ಒಡಂಬಡಿಕೆಯ ಬದಲು ಅಸಮಾನ್ಯ ವ್ಯಕ್ತಿಗಳ ಅಧ್ಯಯನದಿಂದ ಆರಂಭಿಸುತ್ತಿದ್ದೇವೆ.

1. ಆತನು ಹೊಸಒಡಂಬಡಿಕೆಯಲ್ಲಿ ಮೂವತ್ತು ಸಾರಿ ಸೂಚಿಸಲ್ಪಟ್ಟಿದ್ದಾನೆ.
2. ಯೇಸುವಿಗೆ ರೂಪಾಂತರದ ಬೆಟ್ಟದಲ್ಲಿ ಕಾಣಿಸಿಕೊಂಡವರಲ್ಲಿ ಎಲೀಯನೂ ಒಬ್ಬನು.

B. ಆತನೊಬ್ಬ ಪರಿಪೂರ್ಣವ್ಯಕ್ತಿ ಎಂದು ನಾವು ತಿಳಿಯಬಾರದು, ಅಥವಾ ಅದ್ವಿತೀಯಾ ವ್ಯಕ್ತಿ ಎಂದಲ್ಲ, ಆದರೆ ದೇವರ ವಿಶೇಷ ಸಮಯಕ್ಕಾಗಿನ ವಿಶೇಷ ವ್ಯಕ್ತಿಯಾಗಿದ್ದಾನೆ.

I. ಎಲೀಯನ ಸಮಯದಲ್ಲಿ ಇಸ್ರಾಯೇಲು

A. ಎಲೀಯನನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಲು ಆತನ ಸಮಯದ ಹಿನ್ನಲೆಯಲ್ಲಿ ನಾವು ಕಾಣಬೇಕು.

1. 1 ಅರಸು 16:29 ರಿಂದ ಪ್ರಾರಂಭಿಸೋಣ:
   a. ಇಸ್ರಾಯೇಲು ಎರಡು ರಾಜ್ಯಗಳಲ್ಲಿ ವಿಭಾಗವಾಗಿತ್ತು. ಎಲೀಯನು ಉತ್ತರದ ರಾಜ್ಯದಲ್ಲಿ ಕಾರ್ಯಮಾಡುತ್ತಿದ್ದನು.
   b. ಅಹಾಬನು ಇಸ್ರಾಯೇಲನ್ನು ಇಪ್ಪತ್ತೆರಡು ವರುಷಗಳವರೆಗೆ ಆಳಿದನು.
2. ಅಹಾಬನು ತನ್ನ ಜೀವಿತದಲ್ಲಿ ಅನೇಕ ಸಂಗತಿಗಳನ್ನು ಸಾಧಿಸಿದ್ದನು, ಆದರೆ ಲೇಖಕನು ಆ ಸಂಗತಿಗಳಲ್ಲಿ ಅಲ್ಪವಾದ ಕೆಲವನ್ನು ಮಾತ್ರ ನಮಗೆ ತಿಳಿಸಿದ್ದಾನೆ. ಮೊದಲ ಅರಸು 16:30 ಅಹಾಬನ ಆಳ್ವಿಕೆಯ ಬಗೆಗೆ ... ದೇವರ ದೃಷ್ಟಿಕೋನವನ್ನು ತಿಳಿಸುವುದಾಗಿದೆ. "... ತನ್ನ ಪೂರ್ವಾಧಿಕಾರಿಗಳೆಲ್ಲರಿಗಿಂತಲೂ ದುಷ್ಟನೂ ಆಗಿದ್ದನು."
   a. ಆ ಯಾರೊಬ್ಬಾಮನಿಗಿಂತಲೂ ದುಷ್ಟನು (1 ಅರಸು 12:28, 29, 31, 33)
   b. ನಾದಾಬನಿಗಿಂತಲೂ ದುಷ್ಟನು (1 ಅರಸು 15:26, 27)
   c. ಬಾಷನಿಗಿಂತಲೂ ದುಷ್ಟನು (1 ಅರಸು 15:29, 33, 34)
   d. ಏಲನಿಗಿಂತಲೂ ದುಷ್ಟನು (1 ಅರಸು 16:8-10)
   e. ಜಿಮ್ರಿಗಿಂತಲೂ ದುಷ್ಟನು (1 ಅರಸು 16:11, 15)
   f. ಒಮ್ರಿಗಿಂತಲೂ ದುಷ್ಟನು (1 ಅರಸು 16:23-26)
3. ಅಹಾಬನು ಇಜೆಬೇಲಳನ್ನು ಮದುವೆಯಾದನು (1 ಅರಸು 16:31), ಇದು ಇಸ್ರಾಯೇಲ್ಯರ ಅರಸನಿಗೆ ಸಂಬಂಧಿಸಿದಂತೆ ಸೂಚಿತವಾದ ಮೊದಲ ಮದುವೆಯಾಗಿದೆ. ಇದೊಂದೇ ಯಾಕೆ ಸೂಚಿತವಾಯಿತು?
   a. ಇಜೆಬೇಲಳು ಯಾರಾಗಿದ್ದಾಳೆ ಎಂಬ ಕಾರಣದಿಂದ (ಗಮನಿಸಿ ಪ್ರಕಟಣೆ 2:20). "ಆಕೆಯು ಚೀದೋನ್ಯರ ಅರಸನಾದ ಎತ್ಬಾಲನ ಮಗಳಾಗಿ ದ್ದಳು" ಅವಳು ವಿಗ್ರಹಾರಾದಕಳಾಗಿದ್ದಳು (ಧರ್ಮೋಪದೇಶಕಾಂಡ 7:1-5) ಆಕೆಯ ತಂದೆಯು ಬಾಳನ ಪೂಜಾರಿಯಾಗಿದ್ದನು.
   b. ಇಜೆಬೇಲಳು ಮಾಡಿದ ಕಾರಣದಿಂದ: ಆಕೆಯು ಬಾಳನ ಆರಾಧನೆ ಯನ್ನು ಇಸ್ರಾಯೇಲ್ ಸಮಾಜದಲ್ಲಿ ಸೇವೆಯ ಉತ್ಕಟ ಇಚ್ಛೆಯಿಂದ ಪರಿಚಯಿಸಿದಳು.
   c. ಇಜೆಬೇಲಳು ತನ್ನ ಗಂಡನ ಮೇಲೆ ಪ್ರಭಾವಬೀರಿದ್ದರ ಕಾರಣದಿಂದಲೇ: 1 ಅರಸು 16:31-33. ಅಹಾಬನು ಎಲ್ಲಿ ಬಲಹೀನ ನಾಗಿದ್ದನೋ ಅಲ್ಲಿ ಆಕೆಯು ಬಲಶಾಲಿಯಾಗಿದ್ದಳು. (ನೀನು ಯಾರನ್ನು ಮದುವೆ ಯಾಗುತ್ತಿಯೋ ಅವರ ಮೇಲೆ ವ್ಯತ್ಯಾಸವನ್ನು

ಉಂಟುಮಾಡುತ್ತದೆ!)

4. "ಅಹಾಬನು ಮುಂಚೆ ಇದ್ದ ಎಲ್ಲಾ ಅರಸರಿಗಿಂತಲೂ ಹೆಚ್ಚಾಗಿ ಇಸ್ರಾಯೇಲ ದೇವರಾದ ಯೆಹೋವನನ್ನು ರೇಗಿಸಿದನು" (1 ಅರಸು 16:33).

B. ಕಾಲಗಳನ್ನು ನಾವು ನೋಡುವಾಗ, ನಮಗೆ ಆಶ್ಚರ್ಯವಾಗುತ್ತದೆ. ಯೆಹೋವನಿಗೋಸ್ಕರ ಒಬ್ಬರಿಲ್ಲಾ ಒಬ್ಬರು ನಿಲ್ಲುವವರಾಗಿದ್ದಾರೆ. ಇಸ್ರಾಯೇಲರಲ್ಲಿ ದೇವರು ತನ್ನ ಮನುಷ್ಯನನ್ನು ಹೊಂದಿಲ್ಲವೋ?

1. ಮೊದಲ ಅರಸು 16 ವಿಚಿತ್ರವಾದ ಚಿಕ್ಕ ವಚನದೊಂದಿಗೆ ಮುಗಿಯುತ್ತದೆ: ವಚನ 34. ದೇವರು ಇನ್ನೂ ಜೀವಿಸುವವನಾಗಿದ್ದಾನೆ; ದೇವರು ಇನ್ನೂ ಕ್ರಿಯಾಶೀಲನಾಗಿದ್ದಾನೆ!
2. 1 ಅರಸು 17:1ನ್ನು ಗಮನಿಸಿ. ದೇವರು ಇಸ್ರಾಯೇಲಿನಲ್ಲಿ ತನ್ನ ಮನುಷ್ಯನನ್ನು ಹೊಂದಿದ್ದನು, ಮತ್ತು ಆತನ ಹೆಸರು ಎಲೀಯ.

II. ಇಸ್ರಾಯೇಲಿನಲ್ಲಿ ದೇವರ ಮನುಷ್ಯ

A. ಎಲೀಯನು ಯಾರು?

1. ಆತನು "ಗಿಲ್ಯಾದಿನ ಪ್ರವಾಸಿಗಳಲ್ಲಿ ತಿಷ್ಬೀಯನಾಗಿದ್ದನು."
   a. "ತಿಷ್ಬೀಯ" ತಿಷ್ಬೆಯು ಹಳ್ಳಿಗಳಲ್ಲಿನ ಒಂದು ಹಳ್ಳಿಯ ಹೆಸರುಗಳಲ್ಲಿ ಒಂದಾಗಿದೆ.
   b. "ಗಿಲ್ಯಾದ" ಯೋರ್ದನ ಹೊಳೆಯ ಪೂರ್ವಕ್ಕಿರುವ ಕ್ರೂರವಾದ, ಒರಟಾದ ದೇಶವಾಗಿದೆ.
2. ಎಲೀಯನು "ರೋಮಗಳುಳ್ಳ ಚರ್ಮದ ಸೊಂಟದ ಪಟ್ಟಿಯನ್ನು ನಡುಕಟ್ಟಿಗೆ ಸುತ್ತಿದವನಾಗಿದ್ದನು ಕಂಬಳಿ ಹೊದ್ದವನೂ ಆಗಿದ್ದನು" (2 ಅರಸು 1:8; ನೋಡಿರಿ ಜೆಕರ್ಯ 13:4; ಮತ್ತಾಯ 3:4).

B. ಕಾಡು ಮನುಷ್ಯನಂತೆ ಕಾಣುತ್ತಿದ್ದವನು ಅರಸನ ಮುಂದೆ ನಿಂತು ಸವಾಲನ್ನು ಹಾಕುವುದನ್ನು ನೋಡಿರಿ: 1 ಅರಸು 17:1.

1. ಈ ಸವಾಲಿನ ಬಗೆಗೆ ಮೂರು ಸಂಗತಿಗಳನ್ನು ಗಮನಿಸಿರಿ.
   a. ಈ ಸವಾಲು ಅರಸನ ಮುಂದೆ ಮಂಡಿಸಿದ್ದಾಗಿತ್ತು.
   b. ಈ ಸವಾಲು ಬಾಳನಿಗೆ ವಿರುದ್ಧವಾದುದಾಗಿತ್ತು.
   c. ಒಬ್ಬ ಮನುಷ್ಯನಿಂದ ಕೊಡಲ್ಪಟ್ಟ ಸವಾಲು ಆಗಿತ್ತು.
2. ಪ್ರತಿರೊಧಗಳ ವಿರುದ್ಧವಾಗಿ ಎಲೀಯನನ್ನು ನಿಲ್ಲಿಸಲು ಸಮರ್ಥನ್ನನಾಗಿಸಿದ್ದು ಯಾವುದು?
   a. ಆತನ ಹೆಸರೆ ಸೂಚಿಸುವಂತೆ ಆತನ ಪೋಷಕರು ನಿಜವಾದ ದೇವರಲ್ಲಿ ನಂಬಿಕೆಯಿಟ್ಟವರಾಗಿದ್ದರು.
   b. ಆತನ ಮಾತುಗಳು ದೇವರಲ್ಲಿನ ತನ್ನ ದೃಢವಿಶ್ವಾಸವನ್ನು ಸೂಚಿಸುವಂಥವುಗಳಾಗಿವೆ.
   c. ಈತನೇ ಇಸ್ರಾಯೇಲಿನಲ್ಲಿನ ದೇವರ ಮನುಷ್ಯನು.

**ಮುಕ್ತಾಯ**

A. ದೇವರಿಗೆ ವಿಶೇಷ ಸಮಯಕ್ಕಾಗಿ ವಿಶೇಷ ಜನರ ಅವಶ್ಯಕತೆಯು ಇನ್ನೂ ಇದೆ ಆದರೆ ಆತನು ಯಾರು ತಮ್ಮನ್ನು ತಾವು ಸಂಪೂರ್ಣವಾಗಿ ಆತನಿಗೆ ಸಮರ್ಪಿಸಿಕೊಂಡಿರುತ್ತಾರೋ ಅಂಥವನ್ನೇ ಆರಿಸಿಕೊಳ್ಳುತ್ತಾನೆ.

B. ದೇವರ ಪುರುಷನಾಗಿ ಅಥವಾ ಸ್ತ್ರೀಯಾಗಿ ನಿಲ್ಲಲು ಸಿದ್ಧನಾಗಿದ್ದೀಯಾ?